# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ನಾಗ್ಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾಗಿ ದತ್ತಾತ್ರೇಯ ಹೊಸಬಾಳೆ ಮರು ಆಯ್ಕೆಯಾಗಿದ್ದಾರೆ.


ಸಂಪುಟ : 45 ಸಂಚಿಕೆ : 23 ಶೋಭಕೃತ್–ಕ್ರೋಧಿ ಫಾಲ್ಗುಣ–ಚೈತ್ರ ಕಲಿಯುಗಾಬ್ದ 5126 – 5127 01–04–2024 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4





# ಭಾರತವಲ್ಲದೆ ಇನ್ನಾರು ಆಶ್ರಯ?

- ಪಾಕಿಸ್ಥಾನ, ಬಾಂಗ್ಲಾದೇಶ, ಅಫ್ಘಾನಿಸ್ಥಾನ ದೇಶಗಳಲ್ಲಿ ಧಾರ್ಮಿಕ ಶೋಷಣೆಗೆ ಒಳಗಾಗಿರುವ, ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ವಾಸ ಮಾಡುತ್ತಿರುವ ಹಿಂದು, ಸಿಖ್, ಬೌದ್ಧ, ಜೈನಾ, ಪಾರ್ಸಿ ಮತ್ತು ಕ್ರೈಸ್ತರಿಗೆ ತ್ವರಿತವಾಗಿ ಪೌರತ್ವ ನೀಡುವುದೇ ಸಿಎಎ ಮೂಲ ಉದ್ದೇಶ.
- ವಿಶ್ವದಾದ್ಯಂತ ತೊಂದರೆಗೊಳಗಾದ ಹಿಂದುಗಳಿಗೆ ಆಶ್ರಯ ನೀಡುವ ಶಕ್ತಿ ಇರುವ ರಾಷ್ಟ್ರ ಭಾರತ ಮಾತ್ರ. ಅದರ ಸಂಕೇತವೇ ಪೌರತ್ವ ತಿದ್ದುಪಡಿ ಕಾಯಿದೆ.
- ಸಿಎಎ ಭಾರತದ ಪೌರತ್ವವನ್ನು ನೀಡುವ ಕಾಯಿದೆಯೇ ಹೊರತು ಯಾರಿಂದಲೂ ಪೌರತ್ವವನ್ನು ಕಸಿದುಕೊಳ್ಳಲು ಮಾಡಿದ ಕಾನೂನಲ್ಲ.

ವಿಶ್ವದಾದ್ಯಂತ ತೊಂದರೆಗೊಳಗಾದ ಹಿಂದುಗಳಿಗೆ ಆಶ್ರಯ ನೀಡುವ ಶಕ್ತಿ ಇರುವುದು ಭಾರತಕ್ಕೆ ಮಾತ್ರ. ಭಾರತ ಈ ಜವಾಬ್ದಾರಿಯನ್ನು ಹೆಮ್ಮೆಯಿಂದ ನಿಭಾಯಿಸುತ್ತಿರುವುದರ ಸಂಕೇತವೆ ಸಿಎಎ ಅಥವಾ ಪೌರತ್ವ ತಿದ್ದುಪಡಿ ಕಾಯಿದೆ. ಈ ಮೂಲಕ ವಿಶ್ವದೆಲ್ಲೆಡೆ ಇರುವ ಹಿಂದುಗಳಿಗೆ ಭಾರತ 'ಧೈರ್ಯವಾಗಿರಿ ನಿಮಗೆ ನಾವಿದ್ದೇವೆ' ಎಂಬ ಸಂದೇಶ ರವಾನಿಸಿದಂತಾಗಿದೆ.

ಸಿಎಎ ಬಗ್ಗೆ ರಾಜಕೀಯ ಕಾರಣಗಳಿಗಾಗಿ ಸಾಕಷ್ಟು ಸುಳ್ಳುಗಳನ್ನು ಹಬ್ಬಿಸಲಾಗಿದೆ. ಸಿಎಎ ಭಾರತದ ಪೌರತ್ವವನ್ನು ನೀಡುವ ಕಾಯಿದೆಯೇ ಹೊರತು ಯಾರಿಂದಲೂ ಪೌರತ್ವವನ್ನು ಕಸಿದುಕೊಳ್ಳಲು ಮಾಡಿದ ಕಾನೂನಲ್ಲ ಎಂಬುದು ಅತ್ಯಂತ ಸ್ಪಷ್ಟ. ನಮ್ಮ ಅಕ್ಕಪಕ್ಕದ ದೇಶಗಳಾದ ಪಾಕಿಸ್ಥಾನ, ಬಾಂಗ್ಲಾದೇಶ, ಅಫ್ಘಾನಿಸ್ಥಾನ ಮುಂತಾದ ದೇಶಗಳಲ್ಲಿನ ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಹಿಂದುಗಳ ಮೇಲೆ ಇಂದಿಗೂ ಜನಾಂಗೀಯ ಹಿಂಸೆ, ದಾಳಿಗಳು ನಡೆಯುತ್ತಲೇ ಇವೆ. ನಮ್ಮ ದೇಶದಲ್ಲಿ ಯಾವುದೋ ರೆಸಿಡೆನ್ಷಿಯಲ್ ವೆಲ್ ಫೇರ್ ಅಸೋಸಿಯೇಷನ್‌ನ ವಾಟ್ಸ್ಯಾಪ್ ಗ್ರೂಪಿನಲ್ಲಿ ಯಾರೋ ಮುಸ್ಲಿಮರ ಬಗ್ಗೆ ಏನೋ ಹೇಳಿದ್ದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗುತ್ತದೆ. ಆದರೆ ಪಾಕಿಸ್ತಾನ– ಬಾಂಗ್ಲಾದೇಶಗಳಲ್ಲಿ ಹಿಂದುಗಳ ದೇವಸ್ಥಾನ ಕೆಡವಿದ್ದು, ಹಿಂದುಗಳ ಹೆಣ್ಣು ಮಕ್ಕಳನ್ನು ಅಪಹರಿಸಿ, ಬಲವಂತವಾಗಿ ಮದುವೆಯಾಗಿದ್ದು, ಹಿಂದುಗಳನ್ನು ಬಲವಂತವಾಗಿ ಮತಾಂತರಿಸಿದ್ದು ಎಲ್ಲೋ ಚಿಕ್ಕ ಸುದ್ದಿಯಾಗಿ ಬಂದರೆ ಅದು ನಮ್ಮ ಪುಣ್ಯ ಎಂಬ ಸ್ಥಿತಿ ಇದೆ. ಭಾರತದಲ್ಲೇ ಮುಸ್ಲಿಂ ಬಾಹುಳ್ಯವಿರುವ ಪ್ರದೇಶದಲ್ಲಿ ಹಿಂದುಗಳು ವಾಸಮಾಡುವುದು ಎಷ್ಟು ಕಷ್ಟ ಎಂಬುದು ಅಲ್ಲಿ ವಾಸಮಾಡುವವರಿಗೆ ಗೊತ್ತು. ಹೀಗಿರುವಾಗ ಪಾಕಿಸ್ಥಾನ, ಬಾಂಗ್ಲಾದೇಶ ಮುಂತಾದ ದೇಶಗಳಲ್ಲಿ ವಾಸಮಾಡುವ ಹಿಂದುಗಳ ಸ್ಥಿತಿ ಹೇಗಿರಬಹುದು ಎಂಬುದನ್ನು ಸ್ವಲ್ಪ ಮಟ್ಟಿಗೆ ಊಹಿಸಬಹುದು. ಕಳೆದ 76 ವರ್ಷಗಳಲ್ಲಿ ಆ ದೇಶಗಳ ಹಿಂದುಗಳ ಸಂಖ್ಯೆಯಲ್ಲಾದ ಇಳಿಕೆಯನ್ನು ಹಾಗೂ ನಮ್ಮ ದೇಶದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರ ಸಂಖ್ಯೆಯಲ್ಲಾದ ಏರಿಕೆಯನ್ನು ಗಮನಿಸಿದರೆ, ಅಲ್ಲಿ ಅಲ್ಪಸಂಖ್ಯಾತರ ಸ್ಥಿತಿ ಹೇಗಿದೆ ಎಂಬುದನ್ನು ಸುಲಭವಾಗಿ ಊಹಿಸಬಹುದು. ಅದೆಲ್ಲ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಅಲ್ಲಿ ಇಂದಿಗೂ ಹಿಂದುಗಳು ವಾಸಮಾಡುತ್ತಿದ್ದಾರೆ. ಅಂತಹ ಹಿಂದುಗಳು ಅನಿವಾರ್ಯ ಸ್ಥಿತಿಯಲ್ಲಿ ಭಾರತಕ್ಕೆ ಬಂದು ಆಶ್ರಯ ಬಯಸಿದರೆ ಅವರಿಗೆ ತ್ವರಿತವಾಗಿ ಪೌರತ್ವ ನೀಡುವುದೇ ಸಿಎಎ ಮೂಲ ಉದ್ದೇಶ. ಯಾಕೆಂದರೆ ಇವರೆಲ್ಲ ಅಲ್ಲಿನ ಜನಾಂಗೀಯ ಅಥವಾ ಧಾರ್ಮಿಕ ಹಿಂಸೆ, ದಾಳಿಗೆ ಹೆದರಿ ಅಥವಾ ತೊಂದರೆಗೊಳಗಾಗಿ, ಕುಟುಂಬದ ಸದಸ್ಯರನ್ನು ಕಳೆದುಕೊಂಡು ಬರುವವರು ಎಂಬ ಕಾರಣಕ್ಕೆ. ಈ ದೇಶಗಳಿಂದ ಮುಸ್ಲಿಮರೂ ಭಾರತಕ್ಕೆ ಬರುತ್ತಾರೆ. ಉದಾಹರಣೆಗೆ ಪಾಕಿಸ್ಥಾನದ ಹಾಡುಗಾರ ಅದ್ನಂದ್ ಸಾಮಿಗೆ ಭಾರತದ ಪೌರತ್ವ ನೀಡಲಾಗಿದೆ. ಆದರೆ ಆ ದೇಶಗಳಿಂದ ಭಾರತಕ್ಕೆ ಬರುವ ಹೆಚ್ಚಿನ ಮುಸ್ಲಿಮರು ಇಲ್ಲಿ ಉದ್ಯೋಗ, ಉದ್ಯಮ ಅಥವಾ ಉತ್ತಮ ಜೀವನಕ್ಕಾಗಿ ಬರುವವರು. ಅವರು ಆ ದೇಶಗಳಲ್ಲಿ ತೊಂದರೆಗೆ ಒಳಗಾಗಿ, ಜೀವನ ನಡೆಸಲಾಗದೆ ಅಥವಾ ಮನೆ– ಮಠ, ಮಕ್ಕಳನ್ನು ಕಳೆದುಕೊಂಡು, ಹಿಂಸೆಗೆ ಹೆದರಿ ಬರುವವರಲ್ಲ. ಹಾಗಾಗಿ ಅವರು ಭಾರತದ ಪೌರತ್ವ ಬೇಕೆಂದರೆ ಸಾಮಾನ್ಯ ಕಾನೂನಿನ ಪ್ರಕಾರ ಪೌರತ್ವ ಪಡೆದುಕೊಳ್ಳಬಹುದು. ಅದಕ್ಕೆ ಅವಕಾಶ ಇದ್ದೇಇದೆ. ಅದನ್ನು ಸಿಎಎ ರದ್ದುಪಡಿಸುವುದೂ ಇಲ್ಲ.

ಇದಲ್ಲದೆ ಬೇರೆ ಬೇರೆ ದೇಶಗಳಿಂದ ಹಿಂಸಾಚಾರಕ್ಕೆ ಒಳಗಾಗಿ, ನಿರಾಶ್ರಿತರಾಗಿ ಈಗಾಗಲೇ ಭಾರತಕ್ಕೆ ಬಂದ ಹಿಂದುಗಳ ಸಂಖ್ಯೆ ದೊಡ್ಡದಿದೆ. ಅವರಲ್ಲಿ ಎಲ್ಲರಿಗೂ ಇನ್ನೂ ಪೌರತ್ವ ಸಿಕ್ಕಿಲ್ಲ. ಅವರ ಬಳಿ ಸರಿಯಾದ ದಾಖಲೆಗಳಿಲ್ಲ. 1971ರಲ್ಲಿ ಬಾಂಗ್ಲಾದೇಶದಲ್ಲಿ ಹಿಂದುಗಳ ನರಮೇಧ ನಡೆದ ಸಂದರ್ಭದಲ್ಲಿ ಭಾರತಕ್ಕೆ ಓಡಿಬಂದವರಿಗೂ ಕೂಡ ಇನ್ನೂ ಪೌರತ್ವದ ಸಮಸ್ಯೆ ಪರಿಹಾರವಾಗಿಲ್ಲ. ನಮ್ಮ ರಾಜ್ಯದ ಸಿಂಧನೂರಿನಲ್ಲಿ ಬಾಂಗ್ಲಾದೇಶಿ ನಿರಾಶ್ರಿತರ ಶಿಬಿರವಿದೆ. ಅವರಲ್ಲಿ ಸಾಕಷ್ಟು ಜನ ಸ್ಥಳೀಯರನ್ನು ಮದುವೆಯಾಗಿದ್ದಾರೆ. ಇನ್ನು ಕೆಲವರು ಬಾಂಗ್ಲಾದೇಶದಲ್ಲಿರುವ ಸಂಬಂಧಿಕರನ್ನು ಮದುವೆ ಆಗಿದ್ದಾರೆ. ಗಂಡ ಭಾರತದ ಪ್ರಜೆ, ಹೆಂಡತಿ ಭಾರತದ ಪ್ರಜೆಯಲ್ಲ, ಹೆಂಡತಿ ಭಾರತೀಯ ಪ್ರಜೆ ಆದರೆ ಗಂಡ ಭಾರತದ ಪ್ರಜೆಯಲ್ಲ ಎಂಬಂತಹ ಕುಟುಂಬಗಳಿವೆ. ಅವರಿಗೆ ಹುಟ್ಟಿದ ಮಗುವಿಗೆ ಭಾರತದ ಪೌರತ್ವ ಕೊಡಬೇಕೊ ಬೇಡವೊ? ಇಂತಹ ತಾಂತ್ರಿಕ ಸಮಸ್ಯೆಗಳು ಇಂದಿಗೂ ಅಲ್ಲಿವೆ. ಇಂತಹ ಸಮಸ್ಯೆಗಳನ್ನು ಎದುರಿಸುತ್ತಿರುವ ಲಕ್ಷಾಂತರ ನಿರಾಶ್ರಿತ ಹಿಂದುಗಳು ನಮ್ಮ ದೇಶದಲ್ಲಿದ್ದಾರೆ. ಭಾರತ ದೇಶವನ್ನೇ ನಂಬಿ ಬಂದ ಹಿಂದುಗಳನ್ನು ಹಾಗೂ ತಮ್ಮ ದೇಶಕ್ಕಿಂತ ಉತ್ತಮ ಸೌಲಭ್ಯ, ಉದ್ಯೋಗ, ವ್ಯವಸ್ಥೆ, ಸಂಬಳ ಚೆನ್ನಾಗಿದೆ ಎಂಬ ಕಾರಣಕ್ಕೆ ನಮ್ಮ ದೇಶಕ್ಕೆ ನುಸುಳಿದವರಿಗೂ ವ್ಯತ್ಯಾಸ ಇದೆಯಲ್ಲವೆ? ಇಬ್ಬರನ್ನೂ ಒಂದೇ ದೃಷ್ಟಿಯಿಂದ ನೋಡುವುದು ಸರಿಯೂ ಅಲ್ಲ. ಅದಕ್ಕಾಗಿಯೆ ಸಿಎಎ ಜಾರಿ ಮಾಡಲಾಗಿದೆ.

ಇದೆಲ್ಲದರ ಜತೆಗೆ ಮೊದಲು ಪಾಕಿಸ್ಥಾನ, ಬಾಂಗ್ಲಾದೇಶ, ಅಫ್ಘಾನಿಸ್ಥಾನಗಳು ಭಾರತವೇ ಆಗಿದ್ದವು. ಹಾಗಾಗಿ ಅಲ್ಲಿರುವ ಹಿಂದುಗಳೆಲ್ಲ ಒಂದು ಕಾಲದಲ್ಲಿ ಭಾರತೀಯರೆ. ಈಗಲೂ ನಾವು ಅಖಂಡ ಭಾರತ ಎಂಬ ಶಬ್ದವನ್ನು ಬಳಸುತ್ತಿರುತ್ತೇವೆ. ಭಾರತ ವಿಭಜನೆಗೊಂಡಾಗ ಅನಿವಾರ್ಯವಾಗಿ ಅವರೆಲ್ಲ ಬೇರೆ ದೇಶದ ಭಾಗವಾದರೆ ಹೊರತು, ಮೂಲದಲ್ಲಿ ಅವರು ಭಾರತೀಯರೆ. ಹಾಗಾಗಿ ಅವರು ಆಶ್ರಯಬಯಸಿ ಬರುವುದಾದರೆ ಭಾರತಕ್ಕೇ ಬರಬೇಕು. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ಹವಾಮಾನ, ಆಹಾರ, ಭಾಷೆ ಹೀಗೆ ಪ್ರತಿಯೊಂದರಲ್ಲೂ ಅವರು ಭಾರತದೊಂದಿಗೆ ಬೆಸೆದುಕೊಂಡಿದ್ದಾರೆ. ಕಿಂಚಿತ್ತು ಸಹಾಯಕ್ಕಾಗಿ, ಬೊಗಸೆ ಜೀವಕ್ಕಾಗಿ, ನೆಮ್ಮದಿಗಾಗಿ ಅವರು ಭಾರತವನ್ನೇ ನಂಬಿದ್ದಾರೆ. ಇನ್ಯಾಯುವುದೇ ದೇಶವನ್ನು ನಂಬಿಕೊಂಡು ಅವರು ಹುಟ್ಟಿದ ಜಾಗ, ಆಸ್ತಿ ಎಲ್ಲವನ್ನೂ ತೊರೆದು ಬರಲು ಸಾಧ್ಯವಿರಲಿಲ್ಲ. ಅಲ್ಲಿನ ಹಿಂದುಗಳು ನಮ್ಮ ದೇಶದ ಮೇಲಿಟ್ಟಿರುವ ನಂಬಿಕೆ, ಆಶಾಭಾವನೆಯನ್ನು ಈಡೇರಿಸಬೇಕಾದ ಜವಾಬ್ದಾರಿ ನಮ್ಮೆಲ್ಲರದ್ದು.


ಪಾಕಿಸ್ಥಾನ, ಬಾಂಗ್ಲಾದೇಶಗಳು ಸಿಎಎಯನ್ನು ವಿರೋಧಿಸುತ್ತಲೇ ಇವೆ. ನಮ್ಮ ದೇಶದ ಕೆಲವು ಮುಸ್ಲಿಮ್ ನಾಯಕರು ವಿರೋಧಿಸುತ್ತಿದ್ದಾರೆ. ವಿಚಿತ್ರವೆಂದರೆ ಭಾರತ ಈ ಕಾನೂನು ಮಾಡಿರುವುದನ್ನು ವಿರೋಧಿಸುವವರು, ಅವರದ್ದೆ ದೇಶದಲ್ಲಿ ಹಿಂದುಗಳ ಮೇಲೆ ನಡೆಯುತ್ತಿರುವ ಹಿಂಸಾಚಾರ, ದೌರ್ಜನ್ಯ, ಅನ್ಯಾಯಗಳನ್ನು ನಿಯಂತ್ರಿಸಿದ್ದರೆ, ದೇವಸ್ಥಾನಗಳ ಮೇಲಿನ ದಾಳಿಗಳನ್ನು ತಡೆದಿದ್ದರೆ, ಈ ರೀತಿಯ ಕೃತ್ಯಗಳನ್ನು ಎಸಗುವವರನ್ನು ಶಿಕ್ಷಿಸಿದ್ದರೆ, ಭಾರತದಲ್ಲಿ ಹೇಗೆ ಅಲಸ್ಪಂಖ್ಯಾತರು ಜೀವಿಸುತ್ತಿದ್ದಾರೊ ಹಾಗೆ ಅಲ್ಲಿನ ಅಲ್ಪಸಂಖ್ಯಾತರಾದ ಹಿಂದುಗಳು ಜೀವಿಸಲು ಅವಕಾಶ ಕಲ್ಪಿಸಿದ್ದರೆ, ಭಾರತ ಈ ಕಾನೂನು ಮಾಡುವ ಪರಿಸ್ಥಿತಿಯೇ ಬರುತ್ತಿರಲಿಲ್ಲ. ಅವರ ವೈಫಲ್ಯದ ಪರಿಣಾಮವಾಗಿ ಇಂಥದ್ದೊಂದು ಕಾನೂನನ್ನು ಭಾರತ ಜಾರಿ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಅವರೇ ಅಂತಹ ಅನಿವಾರ್ಯತೆ ಸೃಷ್ಟಿಸಿ, ಈಗ ಅದರ ವಿರುದ್ಧವೇ ಮಾತನಾಡುತ್ತಿದ್ದಾರೆ. ಇಲ್ಲಿನ ಮುಸ್ಲಿಮರು ಸಿಎಎ ಬೇಡ ಎಂದು ಹೇಳುವ ಬದಲು ಬೇರೆ ದೇಶದ ಮುಸ್ಲಿಮರಿಗೆ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸದಂತೆ ಹೇಳುವ ಧೈರ್ಯ ತೋರಿದ್ದರೆ, ಸಿಎಎ ಜಾರಿ ಮಾಡುವ ಅಗತ್ಯವೆ ಬರುತ್ತಿರಲಿಲ್ಲ. ಅಮೆರಿಕ ಕೂಡ ಸಿಎಎ ಬಗ್ಗೆ ತಕರಾರು ತೆಗೆದಿದೆ. ವಿಶ್ವದಾದ್ಯಂತ ಮಾನವ ಹಕ್ಕುಗಳ ರಕ್ಷಕನಂತೆ ವರ್ತಿಸುವ ಅಮೆರಿಕ ಪಾಕಿಸ್ಥಾನ ಮತ್ತು ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದುಗಳ ಮೇಲೆ ನಡೆಯುತ್ತಿರುವ ಮಾನವ ಹಕ್ಕು ಉಲ್ಲಂಘನೆ, ಹಿಂಸಾಚಾರದ ಬಗ್ಗೆ, ಅವರ ಕರಾಳ ಸ್ಥಿತಿಯ ಬಗ್ಗೆ ಧ್ವನಿ ಎತ್ತುವುದಿಲ್ಲ. ತೊಂದರೆಗೊಳಗಾದವರಿಗೆ ಆಶ್ರಯ ನೀಡುವ ಸದುದ್ದೇಶದಿಂದ ಭಾರತ ಒಂದು ಕಾನೂನು ಮಾಡಿದರೆ ಅದನ್ನು ಅಮೆರಿಕ ವಿರೋಧಿಸುತ್ತದೆ ಎಂದಾದರೆ, ಅದರ ಮಾನವ ಹಕ್ಕುಗಳ ರಕ್ಷಣೆಯ ಬದ್ಧತೆಯ ಮೇಲೆಯೆ ಅನುಮಾನ ಮೂಡುತ್ತದೆ. ಏಕೆಂದರೆ ಸಿಎಎ ಎಂಬುದು ಯಾವುದೇ ಧರ್ಮದ, ಸಮುದಾಯದ, ಧರ್ಮದ ವಿರುದ್ಧದ ಕಾನೂನಲ್ಲ. ಹೇಗೆ ನೋಡಿದರೂ ಇದು ಯಾರದೇ ವಿರುದ್ಧ ರೂಪುಗೊಂಡಿರುವ ಕಾನೂನು ಅಲ್ಲವೇ ಅಲ್ಲ. ಮಾನವೀಯತೆ, ಕರುಣೆ ತಳಹದಿಯ ಮೇಲೆ, ಕರ್ತವ್ಯದ ಹೊಣೆಗಾರಿಕೆಯ ಮೇಲೆ ಸಿದ್ಧವಾಗಿರುವ, ಮಾನವನಿಗೆ ಅವನಿಚ್ಛೆಯಂತೆ ಜೀವಿಸಲು ಅನುವು ಮಾಡಿಕೊಡುವ, ಮಾನವ ಹಕ್ಕುಗಳನ್ನು ಗೌರವಿಸಲು ರೂಪುಗೊಂಡಿರುವ ಕಾನೂನು. ಮೊದಲಿಂದಲೂ ಅತಿಥಿ ದೇವೋ ಭವ ಎಂಬ ಸಂಸ್ಕೃತಿ ನಮ್ಮದು. ವೈರಿಯೇ ಮನೆ ಬಾಗಿಲಿಗೆ ಬಂದು ಹಸಿವು ಎಂದರೆ ಅವನಿಗೂ ಊಟ ಬಡಿಸು ಎನ್ನುತ್ತದೆ ನಮ್ಮ ಸಂಸ್ಕೃತಿ. ಹೀಗಿರುವಾಗ ನಮ್ಮವರೇ ಬಂದು ಆಶ್ರಯ ಬಯಸಿದರೆ ಕೊಡದೆ ಇರಲಾದೀತೆ?

ಹಾಗಾಗಿ ಯಾರಾದರೂ ಸಿಎಎಯನ್ನು ವಿರೋಧಿಸುತ್ತಿದ್ದಾರೆ ಎಂದರೆ ಅವರು ಮಾನವ ಹಕ್ಕುಗಳನ್ನು ವಿರೋಧಿಸುತ್ತಿದ್ದಾರೆ ಎಂದರ್ಥ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಸದುದ್ದೇಶವನ್ನು ವಿರೋಧಿಸುತ್ತಿದ್ದಾರೆ ಎಂದರ್ಥ.

**■ ವಿನಾಯಕ ಭಟ್ ಮುರೂರು**

## ಸಂಸ್ಮರಣೆ

# ಶ್ರೀ ಶಿವಕುಮಾರ ಸ್ವಾಮೀಜಿ



"ಸಿದ್ದಗಂಗಾ ಮಠದಲ್ಲಿ ನಡೆದಾಡುವ ದೇವರು ಕಲಿಯುಗದಲಿ ನೆಲೆಸಿರುವ ಸತ್ಯಶಿವ ಸದ್ಗುರು" ಶ್ರೀ ಸಿದ್ದಗಂಗಾ ಮಠದ ಪುಣ್ಯ ನೆಲದಲ್ಲಿ ನಿತ್ಯ ಮೊಳಗುವ ಗೀತೆಯಿದು. ಶ್ರೀ ಶಿವಕುಮಾರ ಸ್ವಾಮೀಜಿಯ ಈ ನಾಮಸ್ಮರಣೆ ತುಂಬು ಭಕ್ತಿ ಮತ್ತು ಶುದ್ಧ ಭಾವಪರವಶತೆಯನ್ನೊಳಗೊಂಡಿದೆ. ಏಕೆಂದರೆ ಶಿವಭಕ್ತಿಯ ಮೂಲಕವೇ ಸನ್ಮಾರ್ಗ ಕಂಡುಕೊಂಡು, ಅಕ್ಷರ ಮತ್ತು ಅನ್ನ ದಾಸೋಹವನ್ನಿತ್ತು ಲಕ್ಷಾಂತರ ಮಕ್ಕಳು ಹಾಗೂ ಭಕ್ತಾದಿಗಳನ್ನು ಪೊರೆದು ನೆಲೆ ತೋರಗೊಟ್ಟವರವರು.

**ಪರಿಚಯ:** ಶ್ರೀ ಶಿವಕುಮಾರ ಸ್ವಾಮೀಜಿ ಏಪ್ರಿಲ್ 1, 1907 ರಲ್ಲಿ ವೀರಾಪುರ ಗ್ರಾಮ, ಮಾಗಡಿ ತಾಲೂಕಿನ ರಾಮನಗರದಲ್ಲಿ ಜನಿಸಿದವರು. ಹೊನ್ನೇಗೌಡ ಮತ್ತು ಗಂಗಮ್ಮ ಶ್ರೀಗಳ ತಂದೆ-ತಾಯಿ. ಸುತ್ತಮುತ್ತ ಹಳ್ಳಿಯಲ್ಲಿಯೇ ಪ್ರಾಥಮಿಕ ಮತ್ತು ಮಾಧ್ಯಮ ಶಿಕ್ಷಣವನ್ನು ಮುಗಿಸಿ ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಶಿಕ್ಷಣ ಪಡೆದವರು. ಹೆಚ್ಚಿನ ವಿದ್ಯಾಭ್ಯಾಸವನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪಡೆದರು. ಉದ್ದಾನ ಶಿವಯೋಗಿಗಳ ಪ್ರಭಾವದಿಂದಾಗಿ ಸಿದ್ದಗಂಗಾ ಮಠದೊಂದಿಗೆ ಒಡನಾಟ ಬೆಳೆಯಿತು. ಉದ್ದಾನ ಶ್ರೀಗಳ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರು ಲಿಂಗೈಕ್ಯರಾದಾಗ 1930ರಲ್ಲಿ ಶಿವಕುಮಾರರು 23 ವರ್ಷದ ಯುವಕನಾಗಿದ್ದಾಗ ಅವರ ಹೆಗಲಿಗೆ ಸಿದ್ದಗಂಗಾ ಮಠಾಧಿಪತಿಗಳಾದರು. ಮಠದಲ್ಲಿ ಪ್ರಾರಂಭದಲ್ಲಿಯೇ ಹೊಸ ಕ್ರಾಂತಿಗಳಿಗೆ ನಾಂದಿ ಹಾಡಿದರು. ಜಾತಿ-ಧರ್ಮವನ್ನು ಮೀರಿ ನಿಂತರು. ಮಾನವೀಯತೆ ಒಂದೇ ನಿಜ ಧರ್ಮ ಎಂದು ಸಾರಿದರು. ಮಠದ ವ್ಯಾಪ್ತಿಗೆ ಬರುವ ಶಿಕ್ಷಣ ಸಂಸ್ಥೆಗಳನ್ನು ಪ್ರಗತಿಗೊಳಿಸಿದರು. ಸಾವಿರಾರು ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡಲು ಮುಂದಾದರು. ವಿದ್ಯಾಭ್ಯಾಸದ ಜತೆಗೆ ಅನ್ನ ದಾಸೋಹವನ್ನೂ ನೀಡಿದರು. ಶ್ರೀ ಕ್ಷೇತ್ರ ಅಸಂಖ್ಯಾತ ಭಕ್ತರನ್ನು ತನ್ನತ್ತ ಸೆಳೆಯಿತು. ಅನ್ನ, ಅಕ್ಷರ, ಜ್ಞಾನವನ್ನು ನೀಡುತ್ತಾ ಬಂದ ಶಿವಕುಮಾರ ಸ್ವಾಮೀಜಿ ಅವರನ್ನು ಸಮಾಜ ತ್ರಿವಿಧ ದಾಸೋಹಿ ಎಂದು ಕರೆದು ಗೌರವಿಸಿತು. ಅಧ್ಯಾತ್ಮದ ನಾಯಕರೂ ಆಗಿದ್ದ ಶಿವಕುಮಾರ ಸ್ವಾಮೀಜಿ ನಿರಾಡಂಬರ ಭಕ್ತಿಯಿಂದ ಶಿವನನ್ನು ಒಲಿಸಿಕೊಂಡಿದ್ದರು. ಸ್ವಾಮೀಜಿಗಳ ನಿಸ್ವಾರ್ಥ ಸೇವೆ ಮಾದರಿಯಾಯಿತು, ಅಸಂಖ್ಯಾತ ವ್ಯಕ್ತಿಗಳ ಜೀವನಕ್ಕೆ ಪ್ರೇರಣೆಯಾಯಿತು. ಕಾಯಕವೇ ಕೈಲಾಸ ಎಂದು ನಂಬಿ ಬದುಕಿದ್ದ ಮತ್ತು ಬಸವಣ್ಣನ ತತ್ವಗಳಿಗೆ ಅನ್ವರ್ಥವಾಗಿದ್ದ ಶಿವಕುಮಾರ ಸ್ವಾಮೀಜಿ ತಲೆಮಾರುಗಳಿಗೆ ಸ್ಫೂರ್ತಿ.

ಪ್ರಶಸ್ತಿಗಳು: ಶಿವಕುಮಾರ ಸ್ವಾಮೀಜಿಯವರ ಪ್ರಾಮಾಣಿಕ ಸೇವೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಕರ್ನಾಟಕ ರತ್ನ, ಪದ್ಮಭೂಷಣ ಪ್ರಶಸ್ತಿಗಳು ಸೇರಿದಂತೆ ನೂರಾರು ಪ್ರಶಸ್ತಿಗಳು ಶ್ರೀಗಳನ್ನು ಹುಡುಕಿಕೊಂಡು ಬಂದಿದ್ದವು. 111 ವರ್ಷ ಬದುಕಿದ್ದ ಶ್ರೀ ಶಿವಕುಮಾರ ಸ್ವಾಮೀಜಿಗಳು ಅನಾರೋಗ್ಯದಿಂದ 2019 ಜನವರಿ 21ರಂದು ಶಿವೈಕ್ಯರಾದರು.

## ಸೇವಾಗಾಥಾ

# ಸಾಗುತಿರಲಿ ಸಾಧನೆ ನಿರಂತರ – ಕಾತ್ರೆ ಗುರೂಜಿ

ಕುಷ್ಠರೋಗದಿಂದಾಗಿ ನರಕಮಯ ಜೀವನ ನಡೆಸುವ ರೋಗಿಗಳ ಕುರಿತು ಕಲ್ಪಿಸಿಕೊಂಡರೇನೇ ಮನಸ್ಸು ತಳಮಳಗೊಳಿಸುತ್ತದೆ. ಇಂದಿಗೆ 50 ವರ್ಷಗಳ ಹಿಂದೆ ಈ ರೋಗಿಗಳ ಬಂಧುಗಳೇ ಇವರನ್ನು ಅಭಿಶಾಪವೆಂದು ತಿಳಿದು ಇವರನ್ನು ತ್ಯಜಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಈ ರೋಗಿಗಳಿಗೆ ತಮ್ಮ ಸ್ನೇಹದ ಹಸ್ತವನ್ನು ಚಾಚಿ, ಅವರನ್ನು ಸಕ್ಷಮ ಮತ್ತು ಸಮರ್ಥರನ್ನಾಗಿಸಿ ಸ್ವಾಭಿಮಾನೀ ಜೀವನವನ್ನು ನಡೆಸುವ ದಾರಿಯನ್ನು ತೋರಿಸಿದವರು ಸ್ವಯಂ ಕುಷ್ಠರೋಗಿಯಾದ ಮಧ್ಯಪ್ರದೇಶದ ಚಾಪದಲ್ಲಿ ದೊಡ್ಡ ಲೆಪ್ರಸಿ ಕೇಂದ್ರಕ್ಕೆ ಅಡಿಪಾಯ ಹಾಕಿದ ಸದಾಶಿವ್ ಗೋವಿಂದರಾವ್ ಕಾತ್ರೆಯವರು.

ಕೇವಲ 8 ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡ ಕಾತ್ರೆ ಗುರೂಜಿಯವರದ್ದು ಹೋರಾಟದ ಬದುಕು. ಪ್ರಾಥಮಿಕ ಶಿಕ್ಷಣದ ನಂತರ ರೈಲ್ವೇಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು ಮತ್ತು 1948ರಲ್ಲಿ ಸಂಘವನ್ನು ನಿಷೇಧಿಸಿದ ಸಮಯದಲ್ಲಿ ಆರು ತಿಂಗಳು ಜೈಲಿಗೂ ಹೋದರು. ಹಾಗೆಯೇ ಜೀವನವು ಇವರನ್ನು ಅನೇಕ ಪರೀಕ್ಷೆಗಳಿಗೆ ಒಳಪಡಿಸಿತು. ಇವರ ಧರ್ಮಪತ್ನಿ ಚಿಕ್ಕವಯಸ್ಸಿನಲ್ಲೇ ತೀರಿಕೊಂಡರು. ಸಹೋದರಿಯರ ಸುಪರ್ದಿಯಲ್ಲಿದ್ದ ಇವರ ಆಸ್ತಿ ಮತ್ತು ಒಡವೆಗಳನ್ನು ಅವರು ಹಿಂದಿರುಗಿಸಲಿಲ್ಲ. ಕುಷ್ಠರೋಗದ ಕಾರಣದಿಂದಾಗಿ ದೇಹ ಜರ್ಜರಿತವಾಗಿತ್ತು, ಅವರ ಬಳಿ ಹಣವೂ ಇರಲಿಲ್ಲ ತಮ್ಮವರು ಎಂಬುವವರೂ ಯಾರೂ ಇರಲಿಲ್ಲ, ಯಾವ ಕ್ರಿಶ್ಚಿಯನ್ ಮಿಷನರಿ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದರೊ ಅಲ್ಲಿ ಸೇವೆಯ ಸೋಗಿನಲ್ಲಿ ನಡೆಯುತ್ತಿದ್ದ ಮತಾಂತರದ ವಿರುದ್ಧ ಹೋರಾಡಿದ್ದಕ್ಕಾಗಿ ಅಲ್ಲಿಂದ ಹೊರಹಾಕಲ್ಪಟ್ಟರು. ಹೀಗೆ ಯಾವಾಗ ಎಲ್ಲಾ ದಾರಿಗಳು ಮುಚ್ಚಲ್ಪಟ್ಟವೊ ಆಗ ಗುರೂಜಿಯವರೊಂದಿಗೆ ಇವರ ಭೇಟಿಯಾಯಿತು ಹಾಗೂ ಅವರಿಂದ ಪ್ರೇರಣೆಯನ್ನು ಪಡೆದು ತಮ್ಮಂತೆ ಸಮಾಜದಿಂದ ಬಹಿಷ್ಕೃತಗೊಂಡ ಹಾಗೂ ಬದುಕಿದ್ದು ನರಕವನ್ನು ಅನುಭವಿಸುತ್ತಿರುವ ರೋಗಿಗಳ ಜೀವನವನ್ನು ಸರಿಪಡಿಸುವ ಸಂಕಲ್ಪವನ್ನು ತೊಟ್ಟರು.

ಸೌಂತಿ ಬಳಿಯ ಘೋಗ್ರಾ ನಲಾದ ಕುಷ್ಠರೋಗ ಬಸ್ತಿ ಬಳಿಯ ಒಂದು ಸಣ್ಣ ಗುಡಿಸಲಿನಲ್ಲಿ ಕಾತ್ರೆಜಿ ರೋಗಿಗಳ ಶುಶ್ರುಷೆ ಮತ್ತು ಊಟದ ವ್ಯವಸ್ಥೆಯನ್ನು ಇಬ್ಬರು ರೋಗಿಗಳಿಂದ ಪ್ರಾರಂಭಿಸಿದರು. ಕಾಲುಗಳಲ್ಲಿ ಗಾಯಗಳಿದ್ದ ಕಾರಣ ಅವರಿಗೆ ನಡೆಯಲಾಗುತ್ತಿರಲಿಲ್ಲ, ಹಾಗಾಗಿ ಅವರು ತಮ್ಮ 60ನೇ ವಯಸ್ಸಿನಲ್ಲಿ ಸೈಕಲ್ ಓಡಿಸಲು ಕಲಿತರು. ಒಂದು ಕಟ್ಟೆಯ ಸಹಾಯವನ್ನು ಪಡೆದು ಸೈಕಲ್ ಹತ್ತುತ್ತಿದ್ದರು ಹಾಗೂ ಅನೇಕ ಹಳ್ಳಿಗಳಿಗೆ ಕಿಲೋಮೀಟರ್‌ಗಟ್ಟಲೇ ಸೈಕಲ್ ತುಳಿದು ರೋಗಿಗಳಿಗಾಗಿ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಹಿಂದಿರುಗಿ ಗುಡಿಸಲಿಗೆ ಬಂದು ತಾವೆ ಅಡಿಗೆ ಮಾಡಿ ರೋಗಿಗಳಿಗೆ ಬಡಿಸಿ ಮತ್ತೆ ಅವರ ಶುಶ್ರೂಷೆ ಮಾಡುತ್ತಿದ್ದರು. ಕೆಲವೊಮ್ಮೆ ಹೋದಲ್ಲೆಲ್ಲ ಅಪಮಾನ, ದ್ವೇಷಗಳನ್ನು ಎದುರಿಸಬೇಕಾಗಿತ್ತು, ಕುಡಿಯಲು ಒಂದು ಲೋಟ ನೀರೂ




ಸಿಗುತ್ತಿರಲಿಲ್ಲ. ಆದರೆ ಇವರು ಸೋಲನ್ನೊಪ್ಪಲಿಲ್ಲ, ರೋಗಿಗಳ ಸಂಖ್ಯೆ ಹೆಚ್ಚಾದಂತೆ ಸದಾಶಿವ್ ಅವರ ಪ್ರಯತ್ನಕ್ಕೆ ಕೆಲವು ಸಹವರ್ತಿಗಳು ಸಿಕ್ಕರು. ಯಾವಾಗ ಚಾಪದಲ್ಲಿ ಆಶ್ರಮಕ್ಕಾಗಿ ಭೂಮಿ ದಾನವಾಗಿ ದೊರಕಿತೋ ಇವರು ರೈಲ್ವೇ ಕೆಲಸವನ್ನು ಬಿಟ್ಟಾಗ ಬಂದ ಹಣದಿಂದ ಅಲ್ಲಿ ನಾಲ್ಕು ಕೋಣೆಗಳನ್ನು ನಿರ್ಮಿಸಿದರು, ಕ್ರಮೇಣ ಆಶ್ರಮದಲ್ಲಿ ವಸತಿ ಮತ್ತು ಒಂದು ಸಣ್ಣ ಗೋಶಾಲೆಯು ಸಿದ್ಧವಾಯಿತು.

ಇಂದು ಚಾಪಾದ ಕುಷ್ಠರೋಗ ನಿವಾರಣಾ ಸಂಘ ಕುಷ್ಠರೋಗಿಗಳಿಗೆ ಆಶ್ರಯಸ್ಥಾನವಾಗಿದೆ. ಮೇಣದಬತ್ತಿ ತಯಾರಿಸುವುದು, ಮ್ಯಾಟ್ ನೇಯುವುದು, ಹಗ್ಗ ನೇಯುವುದು, ಚಾಕ್ ಪೀಸ್ ತಯಾರಿಸುವುದು ಇನ್ನೂ ಇಂತಹ ಹಲವಾರು ಕೆಲಸಗಳನ್ನು ಮಾಡುವುದರ ಮೂಲಕ ಈ ರೋಗಿಗಳು ಸ್ವಾಭಿಮಾನದಿಂದ ಬದುಕುತ್ತಾರೆ. ಈ 300 ಜನ ರೋಗಿಗಳ ಮಕ್ಕಳ ಶಿಕ್ಷಣಕ್ಕಾಗಿ ಇಲ್ಲಿ ಸುಶೀಲ ವಿದ್ಯಾಲಯ ಹಾಗೂ ಹಾಸ್ಟೆಲ್ ವ್ಯವಸ್ಥೆ ಕೂಡ ಇದೆ. ಚಾಪದಲ್ಲಿ 85 ಎಕರೆ ಭೂಮಿಯಲ್ಲಿ ಭಾರತೀಯ ಕುಷ್ಠ ನಿವಾರಣಾ ಸಂಘ ಸ್ಥಾಪಿತವಾಗಿದೆ. ಇಲ್ಲಿನ ಆಹಾರಕ್ಕಾಗಿ ಕೃಷಿ ನಡೆಸುತ್ತಿದ್ದಾರೆ. ಅದಕ್ಕಾಗಿ 150 ಗೋಬರ್ ಗ್ಯಾಸ್‌ನ ಘಟಕಗಳಿದ್ದು, ಕೃಷಿಯ ಮೂಲಕ ಸುಮಾರು 1000 ಮೂಟೆಗಳಷ್ಟು ಬೇಳೆ, ಅಕ್ಕಿ ಹಾಗೂ ಇನ್ನಿತರ ಅವಶ್ಯಕ ಬೆಳೆಗಳನ್ನು ಬೆಳೆಯಲಾಗುತ್ತದೆ. ಹತ್ತಿರದಲ್ಲೇ ಇರುವ ಮಾಧವ ಸಾಗರ್ ಕೆರೆಯಿಂದ ನೀರಾವರಿ ವ್ಯವಸ್ಥೆಯನ್ನು ಮಾಡಲಾಗಿದ್ದು 'ಆತ್ಮನಿರ್ಭರ ಭಾರತ' ಕಲ್ಪನೆಯ ಪ್ರತೀಕದಂತಿದೆ. ಇಲ್ಲಿಯ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ ಕಾತ್ರೆಜೀಯವರ ಮೂರ್ತಿಗೆ ನಮಿಸುತ್ತಾ ಇಲ್ಲಿಯ ಪ್ರಬಂಧಕರಾದ ದಾಮೋದರ್ ಬಾಪಟ್ ಹೇಳುತ್ತಾರೆ ಯಾವ ತಂದೆಯನ್ನು ತನ್ನ ಒಬ್ಬಳೇ ಮಗಳ ಮನೆಯವರಿಂದ ಅವಮಾನಿಸಿ ಹೊರಹಾಕಲ್ಪಟ್ಟರೋ ಅವರು ಹಲವಾರು ರೋಗಿಗಳ ಮಾನವನ್ನು ರಕ್ಷಿಸಿದ್ದಲ್ಲದೆ ಮೌಲ್ಯಯುತ ಜೀವನವನ್ನು ಕಟ್ಟಿಕೊಟ್ಟರು, ಇಂದು ಕಾತ್ರೆಜಿ ನಮ್ಮೊಂದಿಗಿಲ್ಲ, ಆದರೆ ಚಾಪದಲ್ಲಿ ಅವರು ಬೆಳಗಿಸಿದ ಸೇವೆಯ ಜ್ಯೋತಿ ಅಂಧಕಾರಮಯವಾದ ಜೀವನಗಳಿಗೆ ಬೆಳಕು ಹರಿಸುತ್ತಿರುತ್ತದೆ.


## ಪುಂಗವ ಪತ್ರಿಕೆಯ ಪ್ರಾರೂಪ
### (ಪ್ರಾರೂಪ-8, ವಿಧಿ – 8)

ಪ್ರಕಟಣೆಯ ಸ್ಥಳ : #74, ರಂಗರಾವ್ ರಸ್ತೆ, ಶಂಕರಪುರಂ ಬೆಂಗಳೂರು-560004

ಪ್ರಕಾಶಕ : **ಕಾ. ಶ್ರೀ. ನಾಗರಾಜ**
# 74, ರಂಗರಾವ್ ರಸ್ತೆ, ಬೆಂಗಳೂರು-560004

ಮಾಲೀಕತ್ವ : **ಕಾ. ಶ್ರೀ. ನಾಗರಾಜ**
# 74, ರಂಗರಾವ್ ರಸ್ತೆ, ಬೆಂಗಳೂರು-560004

ಸಂಪಾದಕ : **ಕಾ. ಶ್ರೀ. ನಾಗರಾಜ**
# 74, ರಂಗರಾವ್ ರಸ್ತೆ, ಬೆಂಗಳೂರು-560004

ಭಾರತದ ಪ್ರಜೆಯೇ : ಹೌದು


ಮುದ್ರಕ : **ರಾಷ್ಟ್ರೋತ್ಥಾನ ಮುದ್ರಣಾಲಯ**
ಕೆಂಪೇಗೌಡನಗರ, ಬೆಂಗಳೂರು-560019

ಮೇಲೆ ನೀಡಿರುವ ಎಲ್ಲ ಮಾಹಿತಿಗಳೂ ಪೂರ್ಣ ಸತ್ಯವೆಂದು ನಾನು **ಕಾ. ಶ್ರೀ. ನಾಗರಾಜ,** (#74, ರಂಗರಾವ್ ರಸ್ತೆ, ಬೆಂಗಳೂರು – 560004) ಘೋಷಿಸುತ್ತೇನೆ.

ಬೆಂಗಳೂರು
25.03.2024

ಸಹಿ
**ಕಾ. ಶ್ರೀ. ನಾಗರಾಜ**
(ಪ್ರಕಾಶಕ)


## ಪುಸ್ತಕ ಪರಿಚಯ




### ಮ್ಯಾನ್ ಆಫ್ ದಿ ಮಿಲೇನಿಯ: ಡಾ ಹೆಡಗೇವಾರ್

ಲೇಖಕರು : ನಾನಾ ಪಾಲ್ಕರ್
ಇಂಗ್ಲಿಷ್ ಅನುವಾದ : ಅನಿಲ್ ಡಿ ನೆನೆ
ಪ್ರಕಾಶಕರು : ಸುರುಚಿ ಪ್ರಕಾಶನ
ಬೆಲೆ : ರೂ. 750/-

ಇಂದಿನ ಭಾರತವು ಸರ್ವಾಂಗೀಣ ಪ್ರಗತಿಯ ಅಲೆಯನ್ನು ಪ್ರದರ್ಶಿಸುತ್ತಿದೆ. ಅದರ ಪ್ರೇರಕ ಶಕ್ತಿಯು ಭಾರತೀಯ ಸಮಾಜದೊಳಗಿನ ರಾಷ್ಟ್ರೀಯ ಪುನರುತ್ಥಾನದ ಉತ್ಸಾಹದಲ್ಲಿ ಹುಟ್ಟಿಕೊಂಡಿದೆ. ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯನ್ನು ತಿಳಿದಿರುವವರು ಸಮಾಜವನ್ನು ಒಂದು ಕಾರ್ಯಪಡೆಯಾಗಿ ಪರಿವರ್ತಿಸುವ ಕಾರ್ಯಕರ್ತರನ್ನಾಗಿ ರಚಿಸಬೇಕಾಗುತ್ತದೆ. ಡಾ. ಕೆ. ಬಿ. ಹೆಡಗೇವಾರ್ ಅಂತಹ ಒಬ್ಬ ದಾರ್ಶನಿಕ ನಾಯಕ, ಸಂಘಟಕ ಮತ್ತು 1925ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿದ ಅಪ್ರತಿಮ ದೇಶಭಕ್ತರಾಗಿದ್ದರು. ಅವರು ಆರಂಭಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘವು ರಾಷ್ಟ್ರೀಯ ಪುನರುತ್ಥಾನದ ವಾತಾವರಣವನ್ನು ಭಾರತೀಯ ಸಮಾಜದಲ್ಲಿ ಮರುಕಳಿಸುವಂತೆ ಮಾಡುವಲ್ಲಿ ಸಫಲವಾಗುತ್ತಿದೆ. ಅಂತಹ ಮಹಾನ್ ನಾಯಕರ ಜೀವನಚರಿತ್ರೆ ಬಹುತೇಕ ಎಲ್ಲಾ ಭಾರತೀಯ ಭಾಷೆಗಳಲ್ಲಿ ಲಭ್ಯವಿದೆ. 21 ನೇ ಶತಮಾನದಲ್ಲಿ ಭಾರತದ ಉದಯವನ್ನು ವಿಶ್ಲೇಷಿಸಲು ಬಯಸುವ ಪ್ರತಿಯೊಬ್ಬ ವಿದ್ವಾಂಸರು, ಸಂಶೋಧಕರು ಅಥವಾ ಚಿಂತಕರು ಡಾ. ಹೆಡಗೇವಾರ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲಸದ ಮೂಲಕ ಭಾರತೀಯ ರಾಷ್ಟ್ರೀಯ ಜೀವನದ ಮೇಲೆ ಬೀರಿದ ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಆರ್‌ಎಸ್‌ಎಸ್ ನ ಶ್ರದ್ಧಾವಂತ ಪ್ರಚಾರಕರಾದ ಶ್ರೀ ಎನ್. ಎಚ್. ಪಾಲ್ಕರ್ ಅವರು ಮೂಲತಃ ಮರಾಠಿಯಲ್ಲಿ ಬರೆದ ಡಾ. ಹೆಡಗೇವಾರ್ ಅವರ ಜೀವನ ಚರಿತ್ರೆಯನ್ನು 'ಮ್ಯಾನ್ ಆಫ್ ದಿ ಮಿಲೇನಿಯ – ಡಾ. ಹೆಡಗೇವಾರ್' ಎಂಬ ಶೀರ್ಷಿಕೆಯಡಿಯಲ್ಲಿ ಪುಸ್ತಕವನ್ನು ಶ್ರೀ ಅನಿಲ್ ಡಿ ನೆನೆ ಅವರು ಅನುವಾದಿಸಿದ್ದಾರೆ.

ವೆಬ್‌ಸೈಟ್: *https://www.suruchiprakashan.com/man-of-the-millennia-dr-hedgewar*

**ಸಂಪಾದಕೀಯ ಸಹಕಾರ:** ವಿನಾಯಕ ಭಟ್ ಮುರೂರು, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ

# ರಾಷ್ಟ್ರೀಯ ಪುನರುತ್ಥಾನಕ್ಕಾಗಿ ಶ್ರೀ ರಾಮಮಂದಿರ

## ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಕೈಗೊಳ್ಳಲಾದ ನಿರ್ಣಯ



ಕಲಿಯುಗಾಬ್ದ 5125 ಪುಷ್ಯ ಶುಕ್ಲ ದ್ವಾದಶಿಯ ದಿನದಂದು ಶ್ರೀ ರಾಮಜನ್ಮಭೂಮಿಯಲ್ಲಿ ಜರುಗಿದ ಭವ್ಯ ಹಾಗೂ ದಿವ್ಯ ರಾಮಲಲಾ ವಿಗ್ರಹದ ಪ್ರಾಣಪ್ರತಿಷ್ಠಾ ಸಮಾರಂಭವು ಪ್ರಪಂಚದ ಇತಿಹಾಸದ ಸುವರ್ಣ ಪುಟಗಳಲ್ಲಿ ಅಚ್ಚಳಿಯದೆ ಉಳಿಯುವಂತಹ ದಿನಗಳಲ್ಲಿ ಒಂದು. ಹಿಂದೂ ಸಮಾಜದ ನೂರಾರು ವರ್ಷಗಳ ಅವಿರತ ಹೋರಾಟ ಮತ್ತು ತ್ಯಾಗ, ಪೂಜ್ಯ ಸಾಧು ಸಂತರ ಮಾರ್ಗದರ್ಶನದಲ್ಲಿ ರಾಷ್ಟ್ರವ್ಯಾಪಿ ನಡೆದ ಚಳುವಳಿಗಳು ಮತ್ತು ಸಮಾಜದ ವಿವಿಧ ವರ್ಗಗಳ ಸಾಮೂಹಿಕ ಸಂಕಲ್ಪದ ಪರಿಣಾಮವಾಗಿ ಪ್ರತಿರೋಧದ ಅವಧಿಯಲ್ಲಿ ಸುದೀರ್ಘ ಅಧ್ಯಾಯಕ್ಕೆ ಒಂದು ಆನಂದದಾಯಕ ನಿರ್ಣಯವನ್ನು ಸಾಧಿಸಿದಂತಾಗಿದೆ. ನಮ್ಮೆಲ್ಲರ ಜೀವನದಲ್ಲಿ ಈ ಅಮೂಲ್ಯ ಕ್ಷಣಗಳನ್ನು ಕಣ್ತುಂಬಿಸಿಕೊಳ್ಳುವ ಘಳಿಗೆಯನ್ನು ಒದಗಿಸಿಕೊಟ್ಟಂತಹ ಸಂಶೋಧಕರು, ಪುರಾತತ್ವಜ್ಞರು, ಚಿಂತಕರು, ವಕೀಲ ಶಿರೋಮಣಿಗಳು, ಮಾಧ್ಯಮದವರು, ಹುತಾತ್ಮರಾದ ಕರಸೇವಕರನ್ನೂ ಒಳಗೊಂಡಂತೆ ಸಮಗ್ರ ಹಿಂದೂ ಸಮಾಜ, ಸರ್ಕಾರ ಹಾಗೂ ಆಡಳಿತ ವರ್ಗ, ಇವರೆಲ್ಲರ ಪಾತ್ರವೂ ಶ್ಲಾಘನೀಯ. ಅಖಿಲ ಭಾರತೀಯ ಪ್ರತಿನಿಧಿ ಸಭಾ ಈ ಆಂದೋಲನದಲ್ಲಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹುತಾತ್ಮರಾದ ಎಲ್ಲಾ ಜೀವಗಳಿಗೆ ಶ್ರದ್ಧಾಂಜಲಿಯನ್ನು ಮತ್ತು ಮೇಲೆ ತಿಳಿಸಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಇಡೀ ಸಮಾಜ ರಾಮಮಂದಿರದ ಪವಿತ್ರ ಮಂತ್ರಾಕ್ಷತೆಯನ್ನು ಎಲ್ಲರಿಗೂ ತಲುಪಿಸುವ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದೆ. ಲಕ್ಷಾಂತರ ರಾಮಭಕ್ತರು ಹಳ್ಳಿ ಪಟ್ಟಣಗಳಲ್ಲಿರುವ ಕೋಟ್ಯಂತರ ಕುಟುಂಬಗಳನ್ನು ಸಂಪರ್ಕಿಸಿದ್ದಾರೆ. ಜನವರಿ 22ರಂದು ಭಾರತ ಮಾತ್ರವಲ್ಲದೆ ಪ್ರಪಂಚದೆಲ್ಲೆಡೆ ಬೃಹತ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಮೆರವಣಿಗೆ, ದೀಪೋತ್ಸವ, ಮನೆ ಮನೆಯಲ್ಲೂ ಭಗವಾಧ್ವಜ, ದೇವಾಲಯಗಳಲ್ಲಿ ಭಜನಾ ಕಾರ್ಯಕ್ರಮಗಳಂತಹ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಸಮಾಜದಲ್ಲಿ ಒಂದು ಹೊಸ ಚೈತನ್ಯವನ್ನು ತುಂಬಿದೆ.

ಅಯೋಧ್ಯೆಯಲ್ಲಿ ಪ್ರಾಣಪ್ರತಿಷ್ಠೆಯ ದಿನದಂದು ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಜೀವನದ ಎಲ್ಲಾ ಶ್ರೇಣಿಗಳ ಹಾಗೂ ಎಲ್ಲಾ ನಂಬಿಕೆ, ಸಂಪ್ರದಾಯ, ಪಂಥಗಳಿಗೆ ಸೇರಿದ ಸಂತರ ಉಪಸ್ಥಿತಿಯನ್ನು ಕಾಣಬಹುದಾಗಿತ್ತು. ಇದರಿಂದಾಗಿ ಶ್ರೀರಾಮನ ಜೀವನಾಧಾರಿತ ಸಾಮರಸ್ಯಭರಿತ ಹಾಗೂ ಶಿಸ್ತುಬದ್ಧ ರಾಷ್ಟ್ರೀಯ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬಹುದಾದ ವಾತಾವರಣವು ಸೃಷ್ಟಿಯಾಗಿತ್ತು. ಇದು ಭಾರತದ ರಾಷ್ಟ್ರೀಯ ಪುನರುಜ್ಜೀವನದ ಒಂದು ಮಹಾಧ್ಯಾಯದ ಶುಭಾರಂಭದ ಸಂಕೇತವಾಗಿದೆ. ಶ್ರೀರಾಮಜನ್ಮಭೂಮಿಯಲ್ಲಿ ರಾಮಲಲಾ ಪ್ರಾಣಪ್ರತಿಷ್ಠಾಪನೆಯೊಂದಿಗೆ ಪಾಶ್ಚಾತ್ಯರ ಆಡಳಿತಾವಧಿ ಮತ್ತು ಸಂಘರ್ಷದಲ್ಲಿ ಹುಟ್ಟಿಕೊಂಡಿದ್ದಂತಹ ಆತ್ಮವಿಶ್ವಾಸದ ಕೊರತೆ ಮತ್ತು ಸ್ವ-ತ್ವದ ಮರೆವಿನಿಂದ ಸಮಾಜ ಹೊರಬರುತ್ತಿದೆ. ಹಿಂದುತ್ವದ ಚೈತನ್ಯದಲ್ಲಿ ಮುಳುಗಿರುವ ಇಡೀ ಸಮಾಜವು ಅದರ 'ಸ್ವ'ವನ್ನು (ಸ್ವ-ತ್ವ) ಗುರುತಿಸಲು ತಯಾರಿ ನಡೆಸುತ್ತಿದೆ ಮತ್ತು ಅದರಂತೆ ಬದುಕಲು ಸಿದ್ಧವಾಗುತ್ತಿದೆ.

ಮರ್ಯಾದಾ ಪುರುಷೋತ್ತಮ ಶ್ರೀರಾಮನ ಜೀವನ ಸಮಾಜ ಹಾಗೂ ರಾಷ್ಟ್ರಕ್ಕಾಗಿ ತ್ಯಾಗ ಮಾಡುವುದಕ್ಕೆ ಮತ್ತು ಸಾಮಾಜಿಕ ಬಾಧ್ಯತೆಗಳಿಗೆ ಬದ್ಧವಾಗಿರುವುದಕ್ಕೆ ಪ್ರೇರಣೆ. ಅವನ ಆಡಳಿತಾವಧಿಯು ಇತಿಹಾಸದಲ್ಲಿ 'ರಾಮರಾಜ್ಯ'ವೆಂದೇ ಹೆಸರುವಾಸಿಯಾಗಿ ಸಾರ್ವತ್ರಿಕ ಹಾಗೂ ಅಲೌಕಿಕ ಆದರ್ಶಗಳನ್ನು ತೋರಿಸಿಕೊಟ್ಟಿದೆ. ಇಂದು ಪ್ರಪಂಚದಲ್ಲಿ ಕ್ಷೀಣಿಸುತ್ತಿರುವ ಜೀವನ ಮೌಲ್ಯಗಳು, ಪತನವಾಗುತ್ತಿರುವ ಮಾನವೀಯ ಸೂಕ್ಷ್ಮತೆ, ಹೆಚ್ಚುತ್ತಿರುವ ವಿಸ್ತರಣಾವಾದಿ ಹಿಂಸಾಚಾರ, ಕ್ರೌರ್ಯ ಮುಂತಾದ ಸವಾಲುಗಳನ್ನು ಎದುರಿಸಲು ಇಂದಿಗೂ 'ರಾಮರಾಜ್ಯ' ಪರಿಕಲ್ಪನೆಯು ಅನುಕರಣಗೆ ಯೋಗ್ಯವಾಗಿದೆ.

ಶ್ರೀರಾಮಮಂದಿರ ನಿರ್ಮಾಣವು ಅರ್ಥಪೂರ್ಣವಾಗಬೇಕಾದಲ್ಲಿ ಇಡೀ ಸಮಾಜವು ಮರ್ಯಾದಾ ಪುರುಷೋತ್ತಮ ಶ್ರೀರಾಮನ ಆದರ್ಶಗಳನ್ನು ಪಾಲಿಸುವ ಪ್ರತಿಜ್ಞೆಯನ್ನು ಮಾಡಬೇಕೆಂದು ಅಖಿಲ ಭಾರತೀಯ ಪ್ರತಿನಿಧಿ ಸಭಾ ಅಭಿಪ್ರಾಯ ಪಡುತ್ತದೆ. ಶ್ರೀರಾಮನ ಜೀವನದಲ್ಲಿ ಕಂಡುಬರುವಂತಹ ತ್ಯಾಗ, ವಾತ್ಸಲ್ಯ, ನ್ಯಾಯ, ಕ್ಷಾತ್ರತ್ವ, ದಯೆ, ಸಮಾನತೆಯಂತಹ ಧರ್ಮದ ಅಲೌಕಿಕ ಮೌಲ್ಯಗಳನ್ನು ಸಮಾಜದಲ್ಲಿ ಉತ್ತೇಜಿಸುವುದು ಅತ್ಯಗತ್ಯ. ಎಲ್ಲಾ ರೀತಿಯ ಪರಸ್ಪರ ಕಲಹ ಮತ್ತು ತಾರತಮ್ಯಗಳನ್ನು ಹೋಗಲಾಡಿಸಿ ಸಾಮರಸ್ಯದ ಆಧಾರದ ಮೇಲೆ ಪುರುಷಾರ್ಥಿ ಸಮಾಜವನ್ನು ನಿರ್ಮಿಸುವುದು ಶ್ರೀರಾಮನ ನಿಜವಾದ ಆರಾಧನೆಯಾಗಿದೆ.

ಭ್ರಾತೃತ್ವ, ಕರ್ತವ್ಯ ಪ್ರಜ್ಞೆ, ಮೌಲ್ಯಾಧಾರಿತ ಜೀವನ ಮತ್ತು ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವ ಸಮರ್ಥ ಭಾರತವನ್ನು ನಿರ್ಮಿಸಲು ಅಖಿಲ ಭಾರತೀಯ ಪ್ರತಿನಿಧಿ ಸಭೆಯು ಎಲ್ಲಾ ಭಾರತೀಯರಿಗೆ ಕರೆ ನೀಡುತ್ತದೆ. ಇದರ ಆಧಾರದ ಮೇಲೆ, ವಿಶ್ವದ ಕಲ್ಯಾಣವನ್ನು ಖಚಿತಪಡಿಸುವ ಜಾಗತಿಕ ಕ್ರಮವನ್ನು ಬೆಳೆಸುವಲ್ಲಿ ಭಾರತವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

# ಪುಣ್ಯಶ್ಲೋಕ ದೇವಿ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜಯಂತಿ ವರ್ಷ

## ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆ



ಮೇ 31, 2024 ರಿಂದ ದೇವಿ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜಯಂತಿ ವರ್ಷ ಪ್ರಾರಂಭವಾಗಲಿದೆ. ಅವರ ಜೀವನ ಭಾರತೀಯ ಇತಿಹಾಸದ ಒಂದು ಸ್ವರ್ಣಿಮ ಪರ್ವವೇ ಸರಿ. ಗ್ರಾಮೀಣ ಭಾಗದ ಸಾಮಾನ್ಯ ಕುಟುಂಬದ ಬಾಲಕಿಯಿಂದ ಹಿಡಿದು ಅಸಾಧಾರಣ ಆಡಳಿತಗಾರ್ತಿಯವರೆಗಿನ ಅವರ ಜೀವನಯಾತ್ರೆ ಇಂದಿಗೂ ಪ್ರೇರಣೆಯ ಮಹಾನ್ ಸ್ರೋತ. ಅವರು ಕರ್ತೃತ್ವ, ಸರಳತೆ, ಧರ್ಮಕ್ಕಾಗಿ ಸಮರ್ಪಣೆ, ಆಡಳಿತ ಕುಶಲತೆ, ದೂರದೃಷ್ಟಿ ಮತ್ತು ಉಜ್ವಲ ಚಾರಿತ್ರ್ಯದ ಅದ್ವಿತೀಯ ಆದರ್ಶ.

'ಶ್ರೀ ಶಂಕರ ಆಜ್ಞೇವರುನ್' (ಶ್ರೀ ಶಂಕರರ ಆಜ್ಞೆಯನುಸಾರ) ಎಂಬ ರಾಜಮುದ್ರೆಯನ್ನೊಳಗೊಂಡಿದ್ದ ಅವರ ಶಾಸನ ಸಾಕ್ಷಾತ್ ಭಗವಾನ್ ಶಂಕರನ ಪ್ರತಿನಿಧಿಯ ರೂಪದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅವರ ಲೋಕ ಕಲ್ಯಾಣಕಾರಿ ಶಾಸನಗಳು ಭೂಮಿರಹಿತ ರೈತರ, ಭೀಲ್ ಗಳಂತಹ ಬುಡಕಟ್ಟು ಸಮೂಹಗಳ, ವಿಧವೆಯರ ಹಿತವನ್ನು ರಕ್ಷಿಸುವಂತಹ ಒಂದು ಆದರ್ಶ ಶಾಸನವಾಗಿತ್ತು. ಸಮಾಜ ಸುಧಾರಣೆ, ಕೃಷಿ ಸುಧಾರಣೆ, ಜಲ ಸಂರಕ್ಷಣೆ, ಪರಿಸರ ರಕ್ಷಣೆ, ಜನಕಲ್ಯಾಣ ಮತ್ತು ಶಿಕ್ಷಣಕ್ಕಾಗಿ ಸಮರ್ಪಿತವಾಗಿದ್ದರ ಜೊತೆಜೊತೆಗೆ ಅವರ ಶಾಸನ ನ್ಯಾಯಪ್ರಿಯವೂ ಆಗಿತ್ತು. ಸಮಾಜದ ಎಲ್ಲಾ ವರ್ಗಗಳ ಸಮ್ಮಾನ, ಸುರಕ್ಷೆ, ಪ್ರಗತಿಗಾಗಿ ಪ್ರಾಮುಖ್ಯತೆ ನೀಡುವ ಸಮರಸತೆಯ ದೃಷ್ಟಿ ಅವರ ಪ್ರಶಾಸನದ ಆಧಾರವಾಗಿತ್ತು.

ಕೇವಲ ಅವರ ರಾಜ್ಯದಲ್ಲಿ ಮಾತ್ರವಲ್ಲದೇ ಸಂಪೂರ್ಣ ದೇಶದ ಮಂದಿರಗಳಲ್ಲಿ ಪೂಜೆಯ ವ್ಯವಸ್ಥೆ ಮತ್ತು ಆರ್ಥಿಕ ನಿರ್ವಹಣೆಯ ಕುರಿತೂ ವಿಶೇಷ ಗಮನವನ್ನು ಹರಿಸಿದ್ದರು. ಬದ್ರಿನಾಥ್ ನಿಂದ ರಾಮೇಶ್ವರದವರೆಗೂ ಮತ್ತು ದ್ವಾರಕೆಯಿಂದ ಪುರಿಯವರೆಗೂ ಆಕ್ರಮಣಕಾರರಿಂದ ಧ್ವಂಸಗೊಳಿಸಲಾದ ದೇವಾಲಯಗಳನ್ನು ಅವರು ಪುನರುಜ್ಜೀವಗೊಳಿಸಿದರು. ಪ್ರಾಚೀನ ಕಾಲದಿಂದ ನಡೆದುಬಂದ ಮತ್ತು ಆಕ್ರಮಣ ಕಾಲದಲ್ಲಿ ನಿಷೇಧಿಸಲಾಗಿದ್ದ ತೀರ್ಥಯಾತ್ರೆಗಳಿಗೆ ಅವರ ಕೆಲಸಗಳಿಂದಾಗಿ ನವೀನ ಚೈತನ್ಯ ಲಭಿಸಿತು. ಈ ಬೃಹತ್ ಕಾರ್ಯಗಳ ಕಾರಣ ಅವರಿಗೆ 'ಪುಣ್ಯಶ್ಲೋಕ' ಎಂಬ ಬಿರುದು ದೊರೆತಿದೆ. ಸಂಪೂರ್ಣ ಭರತವರ್ಷದಲ್ಲಿ ಹಬ್ಬಿದ ಪವಿತ್ರ ಸ್ಥಳಗಳ ವಿಕಾಸ ವಾಸ್ತವದಲ್ಲಿ ಅವರ ರಾಷ್ಟ್ರೀಯ ದೃಷ್ಟಿಯನ್ನು ಪರಿಚಯಿಸಿದೆ.

ಪುಣ್ಯಶ್ಲೋಕ ದೇವಿ ಅಹಲ್ಯಾಬಾಯಿ ಹೋಳ್ಕರ್ ಅವರ ಜಯಂತಿಯ 300ನೇ ವರ್ಷದ ಪಾವನ ಸಂದರ್ಭದಲ್ಲಿ ಅವರಿಗೆ ಶ್ರದ್ಧಾಪೂರ್ವಕ ನಮನಗಳನ್ನು ಸಲ್ಲಿಸುವ ಸಮಸ್ತ ಸ್ವಯಂಸೇವಕರು ಮತ್ತು ಸಮಾಜದ ಬಂಧು-ಭಗಿನಿಯರು ಈ ಹಬ್ಬದಲ್ಲಿ ಆಯೋಜನೆಗೊಳ್ಳಲಿರುವ ಕಾರ್ಯಕ್ರಮಗಳಲ್ಲಿ ಮನಸ್ಪೂರ್ವಕವಾಗಿ ಸಹಭಾಗಿತ್ವವನ್ನು ವಹಿಸಬೇಕು. ಅವರು ತೋರಿಸಿಕೊಟ್ಟಿರುವ ಸರಳತೆ, ಚಾರಿತ್ರ್ಯ, ಧರ್ಮನಿಷ್ಠೆ ಮತ್ತು ರಾಷ್ಟ್ರೀಯ ಆತ್ಮಗೌರವದ ಮಾರ್ಗದಲ್ಲಿ ನಾವು ಅಗ್ರೇಸರರಾದರೆ ಅದು ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವವಾಗಿದೆ. ●

### ಕಾರ್ಯಸ್ಥಿತಿ
### 2023-2024ರ ಅಂಕಿ-ಅಂಶಗಳು

| | | |
|---|---|---|
| ಒಟ್ಟು ಸ್ಥಾನ | : | 45,600 |
| ಒಟ್ಟು ಶಾಖೆ | : | 73,117 |
| ಒಟ್ಟು ಮಿಲನ್ | : | 27,717 |
| ಒಟ್ಟು ಸಂಘ ಮಂಡಳಿ | : | 10,567 |
| ಒಟ್ಟು ಪ್ರಾಥಮಿಕ ಶಿಕ್ಷಾ ವರ್ಗಗಳು | : | 1,364 |
| ಪ್ರಶಿಕ್ಷಣ ಪಡೆದ ಸ್ವಯಂಸೇವಕರು | : | 1,06,883 |



पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th MARCH 2024

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 01-04-2024



# ನಾಗಪುರ : ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನ

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಮಾರ್ಚ್ 15–17, 2024 ಮಹಾರಾಷ್ಟ್ರದ ನಾಗಪುರದ ರೇಶಿಂಬಾಗ್‌ನ ನಡೆಯಿತು. ಬೈಠಕ್‌ನಲ್ಲಿ ರಾಷ್ಟ್ರಾದ್ಯಂತದಿಂದ 1465 ಕಾರ್ಯಕರ್ತರು ಉಪಸ್ಥಿತರಿದ್ದರು. ಸಭೆಯ ಕೊನೆಯ ದಿನ ಮಾರ್ಚ್ 17, 2024ರಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಆರ್ ಎಸ್ ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ರಾಷ್ಟ್ರದ ಜನತೆಯ ಹೃದಯದೊಳಗಡೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರವೇಶಿಸುತ್ತಿದೆ ಹಾಗೂ ಸಮಾಜದಲ್ಲಿ ಸಂಘದ ಪ್ರಭಾವ ವೃದ್ಧಿಸುತ್ತಿದೆ. ಅದರ ಫಲವಾಗಿ ಸಂಘದ ಆಯಮಗಳು, ಶಾಖೆಗಳು ಮತ್ತು ಪ್ರತಿನಿಧಿಗಳ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಿದೆ ಎಂದರು.

ಹಲವು ವರ್ಷಗಳ ಕಾಲ ಸಂಘದ ಕಾರ್ಯಕರ್ತ, ಸ್ವಯಂಸೇವಕರು ಮತ್ತು ಸಂಪೂರ್ಣ ಹಿಂದೂ ಸಮಾಜ ಈ ರಾಷ್ಟ್ರದ ಸಭ್ಯತೆ ಮತ್ತು ಸಂಸ್ಕೃತಿಯ ಅಸ್ಮಿತೆಯ ಪ್ರತೀಕವಾದ ಯಾವ ರಾಮಜನ್ಮಭೂಮಿ ಮತ್ತು ಅಲ್ಲೊಂದು ಮಂದಿರ ನಿರ್ಮಾಣದ ಕನಸನ್ನು ಕಂಡು ಆಗ್ರಹಪೂರ್ವಕವಾಗಿ ಅದಕ್ಕಾಗಿ ಶ್ರಮಿಸಿದ್ದರೋ ಅದು ಇಂದು ನನಸಾಗಿದೆ. ಶ್ರೀರಾಮ ಭಾರತೀಯ ನಾಗರಿಕತೆಯ ಸಂಕೇತ, ರಾಮಮಂದಿರ ನಮ್ಮ ಸಂಸ್ಕೃತಿಯ ಅಸ್ಮಿತೆ ಎನ್ನುವುದನ್ನು ಜನವರಿ 22, 2024ರಂದು ನಡೆದ ರಾಮಲಲಾ ಪ್ರಾಣಪ್ರತಿಷ್ಠಾ ಕಾರ್ಯಕ್ರಮ ಸಾಕ್ಷೀಕರಿಸುತ್ತದೆ. ಆನಂದದ ಸಂಗತಿಯೆಂದರೆ ದೇಶಾದ್ಯಂತ ಸ್ವಯಂಸೇವಕರು ಮತ್ತು ರಾಮಮಂದಿರದ ಪ್ರಾಣಪ್ರತಿಷ್ಠಾ ಕಾರ್ಯಕ್ರಮಕ್ಕಾಗಿ ಕೈಜೋಡಿಸಿದವರ ಪ್ರಯತ್ನದ ಫಲವಾಗಿ ಸುಮಾರು 20 ಕೋಟಿ ಮನೆಗಳ ಸಂಪರ್ಕ ಮಾಡಲಾಗಿದೆ. ಇದರಿಂದಾಗಿ ಜಗತ್ತಿನ ಇತಿಹಾಸದಲ್ಲಿ 15 ದಿನಗಳ ಕಾಲ ನಡೆದ ಅಭಿಯಾನವೊಂದು ಇಷ್ಟು ವ್ಯಾಪಕವಾಗಿ ಜನಸಂಪರ್ಕವನ್ನು ಸಾಧಿಸುವ ದಾಖಲೆಯನ್ನು ಸಹಜವಾಗಿ ನಿರ್ಮಿಸಲು ಸಾಧ್ಯವಾಗಿದೆ. ಇದು ಸಾಧ್ಯವಾಗಿದ್ದು ಎರಡು ಕಾರಣಗಳಿಂದಾಗಿ. ಮೊದಲನೆಯದ್ದು ಮಂದಿರ ನಿರ್ಮಾಣದ ರಾಷ್ಟ್ರೀಯ ಅಭಿಯಾನದಲ್ಲಿ ರಾಷ್ಟ್ರದ ಜನ ಸಹರ್ಷದಿಂದ ಕೈಜೋಡಿಸಿದ್ದು ಮತ್ತು ಎರಡನೇ ಕಾರಣ ಪ್ರತಿ ಮನೆಗೂ ಈ ವಿಷಯವನ್ನು ತಲುಪಿಸಬಲ್ಲ ಸಂಘದ ಸಂಘಟನಾ ಸಂಪರ್ಕದ ಜಾಲ. ಹಾಗಾಗಿ ಸಮಾಜದ ಕಾರ್ಯವನ್ನು ಸಮಾಜವೇ ಮಾಡಿರುವುದರಿಂದ, ರಾಷ್ಟ್ರದ ಕಾರ್ಯವನ್ನು ರಾಷ್ಟ್ರವೇ ಜೊತೆಯಾಗಿ ಸಾಧಿಸಿದ್ದರಿಂದ ನಾವೆಲ್ಲರೂ ಪರಸ್ಪರ ಅಭಿನಂದನೆಗಳನ್ನು ಸಲ್ಲಿಸಿಕೊಳ್ಳಬೇಕಿದೆ ಎಂದರು.

ಸಂಘದ ಶತಾಬ್ದಿ ವರ್ಷದ ನಿಮಿತ್ತ ಸಂಘಟನಾ ದೃಷ್ಟಿಯಿಂದ ಸಂಘದ ಕಾರ್ಯವಿಸ್ತಾರದ ಕುರಿತು ಯೋಜನೆಗಳನ್ನು ರೂಪಿಸಲಾಗಿದೆ. ನಾವು ಸಂಘಕಾರ್ಯದ ದೃಷ್ಟಿಯಿಂದ ಇರುವ ಎಲ್ಲಾ ಮಂಡಲ, ತಾಲ್ಲೂಕು ಮತ್ತು ನಗರಗಳಲ್ಲಿ ನಿತ್ಯಶಾಖೆ ಅಥವಾ ಸಾಪ್ತಾಹಿಕ ಮಿಲನ್ ಹೊಂದುವ ಸಂಕಲ್ಪವನ್ನು ಹೊಂದಿದ್ದೇವೆ. 2025ರ ವಿಜಯದಶಮಿಯಿಂದ ಸಂಘದ ಶತಾಬ್ದಿ ವರ್ಷ ಪ್ರಾರಂಭವಾಗಲಿದ್ದು ಅದಕ್ಕೂ ಮುನ್ನ ಈ ಗುರಿಯನ್ನು ತಲುಪುವ ನಿರೀಕ್ಷೆ ಇದೆ. ಕೋವಿಡ್ ಮಹಾಮಾರಿಯ ಕಾರಣ ಸ್ವಾಭಾವಿಕವಾಗಿ ಸಂಘದ ಕಾರ್ಯವಿಸ್ತಾರದ ವೇಗ ಕುಂಠಿತಗೊಂಡಿತ್ತು. ಕೊರೋನಾ ನಂತರ ಮರಳಿ ವೇಗ ಪಡೆದುಕೊಂಡಿದೆ. ಸಂಘಕಾರ್ಯ ಸರ್ವಸ್ಪರ್ಶಿಯಾಗಬೇಕಿದೆ. ಪ್ರಸ್ತುತ ಹಿಂದೂ ಸಮಾಜದ ಎಲ್ಲಾ ಪಂಥ, ಸಂಪ್ರದಾಯ, ಜಾತಿ, ವರ್ಗಗಳ ಕಾರ್ಯಕರ್ತರ ಸಹಭಾಗಿತ್ವ ಸಂಘದಲ್ಲಿದೆ.

ದೇಶದ ಪ್ರತಿ ಭಾಗದಲ್ಲೂ ಸಂಘಕಾರ್ಯ ವ್ಯಾಪಿಸಿದೆ. ಸಮಾಜದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ದೃಷ್ಟಿಯಿಂದ ಸಂಘ ಕೇವಲ ಸಂಘಟನೆಯಾಗಿರದೆ ಅಕ್ಷರಶಃ ಒಂದು ರಾಷ್ಟ್ರೀಯ ಅಭಿಯಾನವಾಗಿದೆ. ಸಂಘಕಾರ್ಯ ಸ್ವಯಂಸೇವಕರ ಸಹಭಾಗಿತ್ವದಿಂದ ನಡೆಯುತ್ತದೆ. ಸಮಾಜದ ಯಾವುದೇ ಪ್ರಕಾರದ ಒಳ್ಳೆಯ ಕೆಲಸಕ್ಕೆ ಸಹಯೋಗವನ್ನು ನೀಡುವುದಕ್ಕಾಗಿ ಸ್ವಯಂಸೇವಕರನ್ನು ತಯಾರಿ ಮಾಡಲಾಗುತ್ತದೆ. ಪರಿವರ್ತನೆಯ ದೃಷ್ಟಿಯಿಂದ ಕುಟುಂಬದಲ್ಲಿ ಜೀವನಮೌಲ್ಯ, ಪರಿಸರ ಸಂರಕ್ಷಣೆ, ಸಾಮಾಜಿಕ ಸಮರಸತಾ, ಸಮಾಜದಲ್ಲಿನ ಕುರೀತಿಯನ್ನು ದೂರಗೊಳಿಸುವುದಕ್ಕಾಗಿ, ಭಾರತವನ್ನು ಸಮೃದ್ಧಶಾಲಿ, ಸಮರ್ಥಶಾಲಿ, ಸ್ವಾಭಿಮಾನಿ ರಾಷ್ಟ್ರವನ್ನಾಗಿ ನಿರ್ಮಾಣ ಮಾಡುವುದಕ್ಕಾಗಿ ಸಮಾಜದ ಪ್ರತಿ ವರ್ಗದ ಜನ ಸಂಘಕಾರ್ಯದಲ್ಲಿ ವಿಶ್ವಾಸವಿಟ್ಟು ಜೊತೆಗೂಡುತ್ತಿದ್ದಾರೆ. ಇದರಿಂದಾಗಿ ನಮ್ಮಲ್ಲಿ ಧನ್ಯತಾ ಭಾವವಿದೆ, ಸಮಾಜಕ್ಕೆ ಕೃತಜ್ಞತೆಯೂ ಇದೆ.




ಸಮಾಜ ಮತ್ತು ಸಂಘ ಬೇರೆಯಲ್ಲ. ಇದು ನಮ್ಮ ಕಲ್ಪನೆ. ಏಕೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಸಮಾಜದೊಳಗಿನ ಒಂದು ಸಂಘಟನೆಯಲ್ಲ ಆದರೆ ಸಂಪೂರ್ಣ ಸಮಾಜವನ್ನು ಸಂಘಟಿಸುವ ಸಂಘಟನೆ. ಸಂಘದ ಸಾಮಾಜಿಕ ಸದ್ಭಾವದ ಕಾರ್ಯದಲ್ಲಿ ಸಮಾಜದ ಎಲ್ಲಾ ವರ್ಗದ ಜನರಿದ್ದಾರೆ. ನಮ್ಮ ಎಲ್ಲಾ ಗತಿವಿಧಿಗಳು ರಾಷ್ಟ್ರೀಯ ಆಂದೋಲನದ ಭಾಗವಾಗಿವೆ. ಸಮಾಜದಲ್ಲಿ ಕುಟುಂಬದೊಳಗಡೆ ಉತ್ತಮ ಮಾತುಕತೆ ಮೂಡುವಂತೆ ಮಾಡಲು, ಪರಿಸರವನ್ನು ರಕ್ಷಿಸುವಲ್ಲಿ, ಸಾಮಾಜಿಕ ಸಮರಸತೆಯನ್ನು ಉಂಟುಮಾಡುವುದು ಯಾವುದೇ ಒಂದು ಸಂಘಟನೆಯ ಕೆಲಸವಲ್ಲ, ಅದು ಇಡೀ ಸಮಾಜದ ಕೆಲಸ. ಹಾಗಾಗಿ ಒಂದು ಸಂಘಟನೆಗಿಂತ ಹೆಚ್ಚಾಗಿ ಸಂಘ ಒಂದು ಅಭಿಯಾನವಾಗಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಸಂಘದ ನಿತ್ಯಕಾರ್ಯ ಸಂಘಟನೆಯ ಮೂಲಕ ನಡೆಯುತ್ತದೆ ಆದರೆ ಪರಿವರ್ತನೆಯ ಕಾರ್ಯ ಸಮಾಜದ ಮೂಲಕವೇ ನಡೆಯಬೇಕಿದೆ. ಇಂತಹ ಪ್ರಯತ್ನಗಳು ಅದಾಗಲೇ ಸಮಾಜದಲ್ಲಿ ನಡೆಯುತ್ತಿದ್ದು ಆ ಎಲ್ಲಾ ಸಜ್ಜನಶಕ್ತಿಗಳೊಂದಿಗೆ ಸೇರಿ ಸಂಘ ಕೆಲಸ ಮಾಡುತ್ತದೆ. ಸಮಾಜದ ಕೆಲಸಕ್ಕೆ ಅವಶ್ಯಕ ಆಂತರಿಕ ಶಕ್ತಿ ಒದಗಿಸುವುದು ಸಂಘದ ಕೆಲಸ, ಅದನ್ನು ಮಾಡುತ್ತೇವೆ. ಶತಾಬ್ದಿಯ ವರ್ಷದಲ್ಲಿ ಸಮಾಜದ ಕೆಲವು ಆಯಾಮಗಳ ಜೊತೆಗೆ ನಾವು ಮುನ್ನಡೆಯಲಿದ್ದೇವೆ.

ದೇಶದ ಪ್ರಗತಿಯ ವೇಗವನ್ನು ಕುಂಠಿತಗೊಳಿಸುವ ಶಕ್ತಿಗಳು ಕಾಲಕಾಲಕ್ಕೆ ತಲೆಯೆತ್ತುತ್ತವೆ. ಸಮಾಜದಲ್ಲಿ ಸ್ಪೃಶ್ಯ– ಅಸ್ಪೃಶ್ಯ, ಉಚ್ಚ–ನೀಚ ಭಾವದಿಂದ ಕೆಲವು ಘಟನೆಗಳಾದಾಗ ಸಂಘದ ಕಾರ್ಯಕರ್ತ ಧಾರ್ಮಿಕ, ಸಾಮಾಜಿಕ ನೇತೃತ್ವವನ್ನು ವಹಿಸಿಕೊಂಡು ಅವುಗಳನ್ನು ಸರಿಪಡಿಸುವ ಪ್ರಯತ್ನವನ್ನು ಮಾಡುತ್ತಾರೆ. ಕೆಲವು ಸಲ ಸಮಾಜದಲ್ಲಿ ಇಂತಹ ವಿಷಯಗಳ ಕುರಿತು ಇಂದಿಗೂ ಜಾಗೃತಿ ಮೂಡಿಸುವ ದೌರ್ಭಾಗ್ಯದ ಸ್ಥಿತಿ ನಿರ್ಮಾಣವಾಗುತ್ತದೆ. ಹಾಗಾಗಿ ಸಮಾಜದ ಏಕತೆ, ಸಾಮಾಜಿಕ ಸಾಮರಸ್ಯ ಸಂಘದ ಶ್ರದ್ಧೆಯ ವಿಷಯವಾಗಿದೆ. ಅದೊಂದು ತಂತ್ರವಲ್ಲ, ಸಾಂಸ್ಥಿಕ ಪ್ರಯೋಜನ ಅಥವಾ ಫಲಿತಾಂಶವಲ್ಲ. ಅದು ಈ ರಾಷ್ಟ್ರದ ಪ್ರತಿಯೊಬ್ಬರ ಶ್ರದ್ಧೆಯ ವಿಷಯವಾಗಬೇಕು ಎನ್ನುವ ದೃಷ್ಟಿಯಲ್ಲಿ ಸಂಘದ ಕೆಲಸವಾಗುತ್ತಿದೆ.

ಸಂದೇಶ್ ಖಾಲಿಯಂತಹ ಘಟನೆಗಳ ಕುರಿತು ತಿಳಿದಾಗ ಸ್ವಾಭಾವಿಕವಾಗಿ ಆಕ್ರೋಶ ಉಂಟಾಗುತ್ತದೆ. ಸಂಘದ ಸ್ವಯಂಸೇವಕ, ಕಾರ್ಯಕರ್ತ ಅದರ ವಿರುದ್ಧ ಧ್ವನಿಯೆತ್ತಿದರು. ರಾಷ್ಟ್ರಪತಿಯ ಬಳಿ ತೆರಳಿ ವಿಜ್ಞಾಪನೆಯನ್ನೂ ಮಾಡಿಕೊಂಡರು. ಈ ರೀತಿ ರಾಷ್ಟ್ರದ ವಿರುದ್ಧ ಯಾವುದೇ ಕೆಲಸಗಳಾದರೂ ಅದರ ವಿರುದ್ಧ ಧ್ವನಿಯೆತ್ತುವ ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಕಾರ್ಯವನ್ನು ಸಂಘ ಮಾಡುತ್ತಿದೆ ಮತ್ತು ಮಾಡುತ್ತಿರುತ್ತದೆ. ಇವುಗಳ ಜೊತೆಗೆ ದೇಶದ ಯಾವುದೇ ಭಾಗದಲ್ಲಿ ಪ್ರಾಕೃತಿಕ ವಿಕೋಪಗಳು ಎದುರಾದಾಗ ಸಂಘದ ಸ್ವಯಂಸೇವಕರು ನೆರವಿಗೆ ಧಾವಿಸುತ್ತಾರೆ.

> “ಲೋಕಸಭೆ ಚುನಾವಣೆಯು ಸಮೀಪದಲ್ಲಿದೆ. ಮುಂದಿನ ದಿನಗಳಲ್ಲಿ ದೇಶವನ್ನು ಉತ್ತಮಗೊಳಿಸುವ, ಪ್ರಜಾಪ್ರಭುತ್ವವನ್ನು, ಏಕತೆಯನ್ನು ಮತ್ತು ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಂಘದ ಸ್ವಯಂಸೇವಕರು ಶೇ.100ರಷ್ಟು ಮತದಾನ ಆಗುವಂತೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಸಮಾಜದಲ್ಲಿ ತೊಡಗಿಕೊಳ್ಳುತ್ತಾರೆ. ಸಮಾಜದಲ್ಲಿ ಯಾವುದೇ ಪ್ರಕಾರದ ವೈಮನಸ್ಯ, ಗೊಂದಲ, ದೇಶದ ಏಕತೆಯ ವಿರುದ್ಧದ ಮಾತುಗಳು ಬರಬಾರದು. ದೇಶದ ಉನ್ನತಿ, ಪ್ರಗತಿಗಾಗಿ ಈ ಲೋಕತಂತ್ರವನ್ನು ಸಫಲ ಮತ್ತು ಸಾರ್ಥಕಗೊಳಿಸುವುದು ಕೂಡ ದೇಶದ ಕೆಲಸ, ಸಂವಿಧಾನದ ಕರ್ತವ್ಯ, ರಾಷ್ಟ್ರೀಯ ಸ್ವಯಂಸೇವಕ ಸಂಘದ ರಾಷ್ಟ್ರೀಯ ಜವಾಬ್ದಾರಿ.”

ನಂತರ ನಡೆದ ಪ್ರಶ್ನೋತ್ತರದಲ್ಲಿ ಸಾಮರಸ್ಯದ ಕುರಿತು ಮಾತನಾಡುತ್ತಾ ಹಿಂದೂ ಸಮಾಜದ ಒಳಗಡೆ ಇರುವ ಉಚ್ಚ–ನೀಚ, ಸ್ಪೃಶ್ಯ–ಅಸ್ಪೃಶ್ಯದ ಆಧಾರಿತವಾಗಿರುವ ಬೇಧಭಾವವನ್ನು ದೂರಗೊಳಿಸುವುದಕ್ಕಾಗಿ ಸಂಘ ಪ್ರಾರಂಭದ ದಿನಗಳಿಂದ ಕೆಲಸ ಮಾಡುತ್ತಿದೆ. ಮಂದಿರಕ್ಕೆ ಪ್ರವೇಶವಿಲ್ಲ, ನೀರು ಮುಟ್ಟುವ ಹಾಗಿಲ್ಲ, ಸ್ಮಶಾನಕ್ಕೆ ಪ್ರವೇಶ ನಿರಾಕರಣೆ ಮುಂತಾದವುಗಳು ನಗರ ಪ್ರದೇಶಗಳಲ್ಲಿ ಕಡಿಮೆಯೆನಿಸಿದರೂ, ಗ್ರಾಮೀಣ ಭಾಗದಲ್ಲಿ ಇನ್ನೂ ಇದೆ. ಅದನ್ನು ದೂರಗೊಳಿಸಬೇಕಿದೆ. ಇನ್ನು ರಾಷ್ಟ್ರೀಯ ಏಕತೆಯ ದೃಷ್ಟಿಯಿಂದ ಎಲ್ಲಾ ಪಂಥ, ಸಂಪ್ರದಾಯಗಳನ್ನೂ ಸಮಾನವಾಗಿ ಕಾಣಬೇಕು ಎನ್ನುವುದನ್ನು ಸಂಘ ಆಗ್ರಹಪೂರ್ವಕವಾಗಿ ಮಾಡುತ್ತದೆ. ಶ್ರೀರಾಮಜನ್ಮಭೂಮಿಯಲ್ಲಿ ರಾಮಲಲಾನ ಪ್ರಾಣಪ್ರತಿಷ್ಠೆಯ ಕಾರ್ಯಕ್ರಮದಲ್ಲಿ ಎಲ್ಲಾ ಪಂಥ ಸಂಪ್ರದಾಯಗಳು ಭಾಗವಹಿಸಿದ್ದವು. ಈ ನಿಟ್ಟಿನಲ್ಲಿ ಸರಸಂಘಚಾಲಕರು ಕೂಡ ಎಲ್ಲಾ ಪಂಥದವರೊಂದಿಗೆ ಸಂವಾದಗಳನ್ನೂ ನಡೆಸಿದ್ದಾರೆ.

ಮಹಿಳೆಯರ ಸ್ಥಾನಮಾನದ ಕುರಿತು ಮಾತನಾಡುತ್ತ ಮಹಿಳೆಯರ ವಿಷಯದಲ್ಲಿ ಆಗುತ್ತಿರುವ ಅನ್ಯಾಯಕ್ಕೆ ರಾಜಕೀಯವಾದ ಭೇಧಭಾವವನ್ನು ಬಿಟ್ಟು ಒಗ್ಗಟ್ಟಾಗಿ ನಿಲ್ಲುವ ಅಗತ್ಯವಿದೆ. ಇದರ ಕುರಿತು ಮಹಿಳೆಯರಲ್ಲಿಯೂ ಜಾಗೃತಿ ಮೂಡಿಸಬೇಕಾಗಿದೆ. ಈ ಜಾಗೃತಿಯನ್ನು ಮೂಡಿಸುವುದಕ್ಕಾಗಿ ರಾಷ್ಟ್ರವ್ಯಾಪಿ ಮಹಿಳಾ ಸಮ್ಮೇಳನಗಳನ್ನು ಆಯೋಜಿಸಲಾಗಿತ್ತು. ದೇಶವ್ಯಾಪಿ 5 ಲಕ್ಷಕ್ಕೂ ಅಧಿಕ ಮಹಿಳೆಯರು ಜಿಲ್ಲೆ ಮತ್ತು ವಿಭಾಗಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ದೇಶ ಮತ್ತು ಸಮಾಜದ ದೃಷ್ಟಿಯಿಂದ ಮಹಿಳೆಯರ ಭೂಮಿಕೆಯೇನು ಎನ್ನುವುದರ ಕುರಿತು ಚರ್ಚಿಸಿದರು. ರಾಷ್ಟ್ರ ನಿರ್ಮಾಣದಲ್ಲಿ ಪ್ರಭಾವಿ ಭೂಮಿಕೆ ಮಹಿಳೆಯರದ್ದಿದೆ ಎನ್ನುವುದು ಸಂಘಕ್ಕೆ ತಿಳಿದಿದೆ. ಹಾಗಾಗಿ ಸಾಮಾಜಿಕ ಪರಿವರ್ತನೆಗಾಗಿ ಕಾರ್ಯನಿರ್ವಹಿಸುತ್ತಿರುವ ಸಂಘದ ಗತಿವಿಧಿಗಳಲ್ಲಿ ಮಹಿಳೆಯ ಭಾಗವಹಿಸುವಿಕೆ ಹೆಚ್ಚಿದೆ, ಇನ್ನೂ ಹೆಚ್ಚಾಗಬೇಕಿದೆ.

ಚುನಾವಣ ಬಾಂಡ್ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಸರಕಾರ್ಯವಾಹರು ಈ ಸಭೆಯಲ್ಲಿ ಅದರ ಕುರಿತು ನಾವು ಚರ್ಚಿಸಲಿಲ್ಲ. ಆದರೆ ಚುನಾವಣಾ ಬಾಂಡ್ ಎನ್ನುವುದು ಅಚಾನಕ್ ಆಗಿ ಬಂದಂತಹದ್ದಲ್ಲ. ಅದರ ಕುರಿತು ರಾಷ್ಟ್ರದಲ್ಲಿ ಈ ಮೊದಲೂ ಚರ್ಚೆಗಳಾಗಿವೆ. ಪ್ರಸ್ತುತ ಚುನಾವಣಾ ಬಾಂಡ್ ಎನ್ನುವಂತಹದ್ದು ಒಂದು ಹೊಸ ಪ್ರಯೋಗದ ರೂಪದಲ್ಲಿ ಬಂದಿದೆ. ಇವಿಎಂ ಬಂದಾಗಲೂ ಅದರ ಕುರಿತಾದ ಚರ್ಚೆ ದೇಶದಲ್ಲಿ ಆಗಿತ್ತು. ಹೊಸ ಪ್ರಯೋಗಗಳು ಬಂದಾಗ ಪ್ರಶ್ನೆಗಳು ಏಳುವುದು ಸಹಜ. ಆದರೆ ಅವುಗಳ ಉಪಯೋಗ ಮತ್ತು ಪರಿಣಾಮವೇನು ಎನ್ನುವುದನ್ನು ಗಮನಿಸಿ ಸ್ವೀಕರಿಸಬೇಕು ಎನ್ನುವುದು ಸಂಘದ ವಿಚಾರವಾಗಿದೆ ಎಂದು ನುಡಿದರು.

ಕೃಷಿ ಕಾಯ್ದೆ ವಿರೋಧಿಸಿ ನಡೆದ ಪ್ರತಿಭಟನೆಯ ಕುರಿತಾದ ಪ್ರಶ್ನೆ ಉತ್ತರಿಸುತ್ತಾ ಪ್ರತಿಭಟನೆಯ ನೆಪದಲ್ಲಿ ಮೊದಲ ವರ್ಷ ಕೆಲವು ಅರಾಜಕತೆ ಉಂಟಾಯಿತು. ಅದರಲ್ಲಿ ಕೃಷಿಕರ ಪರವಾಗಿರುವ ಉದ್ದೇಶಕ್ಕಿಂತ ವ್ಯವಸ್ಥೆಯನ್ನು ಅತಂತ್ರಗೊಳಿಸುವ ಉದ್ದೇಶ ಅಧಿಕವಿತ್ತು ಎಂದು ಅಭಿಪ್ರಾಯಪಟ್ಟರು. ಕಾಶಿ ಮತ್ತು ಮಥುರಾದ ಕುರಿತಾದ ಪ್ರಶ್ನೆಗೆ ಉತ್ತರಿಸುತ್ತಾ ರಾಮಮಂದಿರಕ್ಕೆ ನಡೆದ ಹೋರಾಟದಂತೆಯೇ ಎಲ್ಲಾ ಹೋರಾಟಗಳು ಆಗಬೇಕೆಂದೇನಿಲ್ಲ. ಅವುಗಳಿಗೆ ಪರ್ಯಾಯ ಮಾರ್ಗಗಳಿರುತ್ತವೆ ಎಂದರು. ಇನ್ನು ಸಮಾನ ನಾಗರಿಕ ಸಂಹಿತೆಯ ಕುರಿತು ಪ್ರಶ್ನೆಗೆ ಉತ್ತರಿಸಿದ ಸರಕಾರ್ಯವಾಹರು ಅದಾಗಲೇ ಉತ್ತರಖಂಡದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿಗೆ ಬಂದಿದೆ. ದೇಶಾದ್ಯಂತ ಜಾರಿಗೆ ತರುವುದನ್ನು ಸಂಘ ಸ್ವಾಗತಿಸುತ್ತದೆ ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನಗೊಂಡಿದೆ. ಸಂಘದ ಕಾರ್ಯಚಟುವಟಿಕೆಗಳ ದೃಷ್ಟಿಯಿಂದ 6 ಮಂದಿ ಸಹಸರಕಾರ್ಯವಾಹರುಗಳಿರಲಿದ್ದಾರೆ.

1. ಶ್ರೀ ಡಾ. ಕೃಷ್ಣಗೋಪಾಲ್
2. ಶ್ರೀ ಮುಕುಂದ ಸಿ ಆರ್
3. ಶ್ರೀ ಅರುಣ್ ಕುಮಾರ್
4. ಶ್ರೀ ರಾಮದತ್ ಚಕ್ರಧರ್
5. ಶ್ರೀ ಅತುಲ್ ಲಿಮಯೇ
6. ಶ್ರೀ ಆಲೋಕ್ ಕುಮಾರ್

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 8722552497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.